6	ಹರಪನಹಳ್ಳಿ ತಾ: ದಾವಣಗೆರೆ-ಹೊಳಲು ರಸ್ತೆ(ರಾಜ್ಯ ಹೆದ್ದಾರಿ-150)ಕಿ.ಮೀ 38.50 ರಿಂದ 42.00 ರವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ(**ಬದಲಿ ಕಾಮಗಾರಿ**)(**44711**)	ಹರಪನಹಳ್ಳಿ	0.00	0.00
7	ಹರಪನಹಳ್ಳಿ ತಾ: ಎಕ್ಕುಂಬಿ-ಮೊಳಕಾಲ್ಮೂರು ರಸ್ತೆ ಕಿಮೀ. 115.00 ರಿಂದ 120.00ರವರೆಗೆ ಮರು ಡಾಂಬರೀಕರಣ (ಎಸ್.ಹೆಚ್-2)(**41765**)	ಹರಪನಹಳ್ಳಿ	0.00	0.00
	ಹರಪನಹಳ್ಳಿ ಒಟ್ಟು		**0.00**	**0.00**
	ದಾವಣಗೆರೆ ವಿಭಾಗ ಒಟ್ಟು		**575.79**	**575.79**

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	173
2	ಸದಸ್ಯರ ಹೆಸರು	:	ಶ್ರೀ ವಿ.ಸೋಮಣ್ಣ
3	ಉತ್ತರಿಸುವ ದಿನಾಂಕ	:	12-12-2018
4	ಉತ್ತರಿಸುವವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಳವಡಿಸಲಾಗಿರುವ ಅನಧಿಕೃತ ಫ್ಲೆಕ್ಸ್/ಜಾಹೀರಾತುಗಳನ್ನು ತೆರವುಗೊಳಿಸುವ ಕುರಿತು ರಾಜ್ಯ ಉಚ್ಚ ನ್ಯಾಯಾಲಯ ನೀಡಿರುವ ಸೂಚನೆ ಏನು (ವಿವರ ನೀಡುವುದು);	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ ಫ್ಲೆಕ್ಸ್ / ಜಾಹಿರಾತುಗಳನ್ನು ಅಳವಡಿಸುವುದು ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ಮತ್ತು ಕರ್ನಾಟಕ ಓಪನ್ ಪ್ಲೇಸಸ್ (ಪ್ರಿವೆನ್ಷನ್ ಆಫ್ ಡಿಸ್‌ಫಿಗರ್‌ಮೆಂಟ್) ಆ್ಯಕ್ಟ್ 1981ರ ಕಲಂ (3)ಎ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಅದರಂತೆ ಸರ್ಕಾರವು ಪರಿಸರ (ಸಂರಕ್ಷಣೆ) ಕಾಯಿದೆ 1986ರ ಸೆಕ್ಷನ್ 5ರ ಅಡಿಯಲ್ಲಿ ಅಧಿಕಾರ ಚಲಾಯಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ದಿನಾಂಕ: 11-03-2016 ರಂತೆ ಪ್ಲಾಸ್ಟಿಕ್ ಒಳಸುವುದನ್ನು ನಿಷೇಧಿಸಿದೆ. ಆದರೂ ಸಹ ನಗರದ್ಯಾಂತ ಫ್ಲೆಕ್ಸ್/ಬ್ಯಾನರ್ಸ್ ರಾಜಾಜಿಸುತ್ತಿದ್ದು, ಇದರಿಂದ ಪರಿಸರಕ್ಕೆ ಹಾನಿ ಉಂಟಾಗುತ್ತಿದ್ದು, ಬೆಂಗಳೂರು ನಗರ ಸೌಂದರ್ಯಕ್ಕೆ ದಕ್ಕೆಯಾಗುತ್ತಿದ್ದು, ಕೂಡಲೇ ನಗರ ವ್ಯಾಪ್ತಿಯಲ್ಲಿ ಅಳವಡಿಸಿರುವ ಎಲ್ಲಾ ಅನಧಿಕೃತ ಫ್ಲೆಕ್ಸ್/ಬ್ಯಾನರ್ಸ್ ಮತ್ತು ಇತರೇ ಜಾಹೀರಾತುಗಳನ್ನು ತೆರವುಗೊಳಿಸಲು ಪಾಲಿಕೆಗೆ ರಾಜ್ಯ ಉಚ್ಚ ನ್ಯಾಯಾಲಯ ವಿಭಾಗೀಯ ಪೀಠವು ರಿಟ್ ಅರ್ಜಿ ಸಂಖ್ಯೆ: 57990/2017 ರಲ್ಲಿ ಸೂಚನೆ ನೀಡಿರುತ್ತದೆ.
ಆ)	ನ್ಯಾಯಾಲಯ ನೀಡಿರುವ ಸೂಚನೆಯನ್ನು ಜಾರಿಗೆ ತರಲಾಗಿದೆಯೇ; ನ್ಯಾಯಾಲಯದ ಆದೇಶದ ಆನಂತರ ಈವರೆಗೆ ಎಷ್ಟು ಅನಧಿಕೃತ ಫ್ಲೆಕ್ಸ್/ಜಾಹೀರಾತುಗಳನ್ನು ತೆರವುಗೊಳಿಸಲಾಗಿದೆ (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);	ಹೌದು. ಮಾನ್ಯ ನ್ಯಾಯಾಲಯವು ನೀಡಿರುವ ಸೂಚನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಜಾರಿಗೆ ತರಲಾಗಿದೆ. • ಮಾನ್ಯ ನ್ಯಾಯಾಲಯವು ಮೇಲ್ಕನವಿಯ ವಿಚಾರಣೆ ನಂತರ ಈವರೆಗೆ ಕೆಳಕಂಡಂತೆ ವಲಯವಾರು ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ವಿವರಗಳು ಕೆಳಕಂಡಂತಿವೆ

ಕ್ರ ಸಂ.	ವಲಯ	ತೆರವುಗೊಳಿಸಿರುವ ಫ್ಲೆಕ್ಸ್/ಬ್ಯಾನರ್ಸ್/ ಫಲಕಗಳ ವಿವರ	
		ಫ್ಲೆಕ್ಸ್/ಬ್ಯಾನರ್ಸ್ ಜಾಹೀರಾತುಗಳು	ಅನಧಿಕೃತ ಜಾಹೀರಾತು ಫಲಕಗಳು
1	ಪೂರ್ವ	4834	511
2	ಪಶ್ಚಿಮ	1442	113
3	ದಕ್ಷಿಣ	1657	295
4	ಬೊಮ್ಮನಹಳ್ಳಿ	2049	114
5	ಮಹದೇವಪುರ	4452	435
6	ಯಲಹಂಕ	1905	81
7	ರಾಜರಾಜೇಶ್ವರಿನಗರ	4848	80
8	ದಾಸರಹಳ್ಳಿ	1294	03
	ಒಟ್ಟು	**22481**	**1632**

		ವಲಯವಾರು ಮಾಹಿತಿಯನ್ನು ವಿಧಾನಸಭಾ ಕ್ಷೇತ್ರವಾರು ಪ್ರತ್ಯೇಕಿಸಿದ್ದು, ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಲಯವಾರು ಮಾಹಿತಿಯನ್ನು **ಅನುಬಂಧ-1 ರಿಂದ 8** ರವರೆಗೆ ನೀಡಿದೆ.
ಇ)	ಅನಧಿಕೃತ ಜಾಹೀರಾತು ಅಳವಡಿಸಿರುವ ಸಂಸ್ಥೆಗಳು ಮತ್ತು ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಲು ನ್ಯಾಯಾಲಯವು ಆದೇಶ ನೀಡಿದೆಯೇ; ಹಾಗಿದ್ದಲ್ಲಿ, ಇವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು;	ಹೌದು. ಅನಧಿಕೃತ ಜಾಹೀರಾತು ಅಳವಡಿಸಿರುವ ಸಂಸ್ಥೆಗಳು ಮತ್ತು ವ್ಯಕ್ತಿಗಳ ವಿರುದ್ಧ ಕಾನೂನು ಪ್ರಕಾರ ಕ್ರಮಕೈಗೊಳ್ಳಲು ನ್ಯಾಯಾಲಯವು ಸೂಚಿಸಿದ್ದು, ಅನಧಿಕೃತ ಜಾಹೀರಾತುಗಳನ್ನು ಅಳವಡಿಸಿರುವವರ ವಿರುದ್ಧ ಪಾಲಿಕೆಯು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ 1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ದಿನಾಂಕ: 13-08-2018 ಮತ್ತು 15-08-2018 ಪತ್ರಿಕಾ ಪ್ರಕಟಣೆ ಹೊರಡಿಸಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನೀಡಲಾದ ಅನುಮತಿ ಪತ್ರ ಮತ್ತು ಇನ್ನಿತರೆ ಅವಶ್ಯ ದಾಖಲೆಗಳನ್ನು ನಿಗಧಿತ ದಿನಾಂಕ: 20-08-2018 ರೊಳಗಾಗಿ ಪಾಲಿಕೆಯ ಆಯಾ ವಲಯ ಜಂಟಿ ಆಯುಕ್ತರವರ ಇ-ಮೇಲ್ ಐಡಿಗೆ ಅಥವಾ ಆಯಾ ವ್ಯಾಪ್ತಿ ಪ್ರದೇಶದ ಸಹಾಯಕ ಕಂದಾಯ ಅಧಿಕಾರಿ ರವರ ಕಛೇರಿಗೆ ಸಲ್ಲಿಸುವುದು. ತಪ್ಪಿದಲ್ಲಿ ದಿನಾಂಕ: 30-08-2018 ರೊಳಗೆ ಅಥವಾ ಮುಂಚಿತವಾಗಿ ಸದರಿ ಜಾಹೀರಾತು ಫಲಕಗಳನ್ನು ಸ್ವ-ಇಚ್ಚೆಯಿಂದ ತೆಗೆದು ಹಾಕಲು ಸಾರ್ವಜನಿಕರಿಗೆ, ಜಾಹೀರಾತು ಸಂಸ್ಥೆ/ಸಂಘ ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ. 2. ಆದರೂ ಸಹ ಜಾಹೀರಾತು ಫಲಕಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸದ ಅನಧಿಕೃತ ಜಾಹೀರಾತು ಫಲಕಗಳನ್ನು ಸಂಪೂರ್ಣವಾಗಿ ತೆರವುಗೊಳಿಸದ ಕಾರಣ ದಿನಾಂಕ: 01-09-2018 ರಂದು ಪತ್ರಿಕಾ ಪ್ರಕಟಣೆ ಹೊರಡಿಸಿ ಅನಧಿಕೃತ ಜಾಹೀರಾತು ಫಲಕಗಳನ್ನು ದಿನಾಂಕ: 06-09-2018 ರೊಳಗಾಗಿ ಸ್ವ-ಇಚ್ಚೆಯಿಂದ ತೆಗೆದುಹಾಕಲು ಕಾಲಾವಕಾಶ ನೀಡಲಾಗಿದೆ. ತಪ್ಪಿದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾನೂನು ರೀತ್ಯಾ ಕ್ರಮಕೈಗೊಳ್ಳುತ್ತದೆ ಮತ್ತು ಆಯಾ ವ್ಯಾಪ್ತಿಯ ಪೊಲೀಸರ ನೆರವು ಪಡೆದು ಜಾಹೀರಾತು ಫಲಕಗಳನ್ನು ಪಾಲಿಕೆಯಿಂದ ತೆರವುಗೊಳಿಸಲಾಗುವುದು. ಅಲ್ಲದೆ, ತಪ್ಪಿತಸ್ಥ ವ್ಯಕ್ತಿಗಳ/ ಏಜೆನ್ಸಿಗಳ/ ಸಂಸ್ಥೆಗಳ ವಿರುದ್ಧ ಸೂಕ್ತ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುತ್ತದೆಂದು ಅಂತಿಮ ಸೂಚನೆ ನೀಡಲಾಗಿರುತ್ತದೆ. 3. ಮೇಲ್ಕಂಡಂತೆ ಸೂಚನೆಗಳನ್ನು ನೀಡಿದರೂ ಸಹ ಸದರಿ ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸದೆ ಇರುವಂತಹವರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲು ಮಾಡಲಾಗಿದೆ.

ಈ)	ಅನಧಿಕೃತ ಫ್ಲೆಕ್ಸ್, ಮತ್ತು ಜಾಹೀರಾತು ತೆರಯುವ ಕಾರ್ಯಕ್ಕೆ ಅಡ್ಡಪಡಿಸಿದ ಎಷ್ಟು ಜನರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; ಅನಧಿಕೃತ ಫ್ಲೆಕ್ಸ್ ಮತ್ತು ಜಾಹೀರಾತು ಅಳವಡಿಕೆಯನ್ನು ತಡೆಯಲು ವಿಫಲವಾದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು);	ಅನಧಿಕೃತ ಫ್ಲೆಕ್ಸ್ ಮತ್ತು ಜಾಹೀರಾತು ತೆಗೆದುಹಾಕದೆ ಇರುವ 414 ತಪ್ಪಿತಸ್ಥರ ವಿರುದ್ಧ ಕರ್ನಾಟಕ ಓಪನ್ ಪ್ಲೇಸಸ್ (ಪ್ರಿವೆನ್ಷನ್ ಆಫ್ ಡಿಸ್‌ಫಿಗರ್‌ಮೆಂಟ್) ಆ್ಯಕ್ಟ್, 1981ರ ಅಡಿಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯ ಸರಹದ್ದಿನ ವಿವಿಧ ಪೋಲೀಸ್ ಠಾಣೆಗಳಲ್ಲಿ ಎಫ್.ಐಆರ್. ದಾಖಲು ಮಾಡಲಾಗಿದೆ. ಪಾಲಿಕೆಯ ಅಧಿಕಾರಿಗಳು ಪ್ರತಿನಿತ್ಯ ತಮ್ಮ ಕ್ಷೇತ್ರದ ಕಾರ್ಯವ್ಯಾಪ್ತಿಯಲ್ಲಿ ಅನಧಿಕೃತ ಫ್ಲೆಕ್ಸ್ ಮತ್ತು ಜಾಹೀರಾತು ಅಳವಡಿಸುವುದನ್ನು ನಿಯಂತ್ರಿಸಲು ಸಿಬ್ಬಂದಿಗಳೊಂದಿಗೆ ಅಗತ್ಯ ಕ್ರಮವಹಿಸುತ್ತಿರುತ್ತಾರೆ. ಯಾವುದೇ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳುವ ಅವಕಾಶವು ಉದ್ಭವಿಸಿರುವುದಿಲ್ಲ.
ಉ)	ಅನಧಿಕೃತ ಜಾಹೀರಾತು ಅಳವಡಿಕೆಯನ್ನು ತಡೆಯಲು ನೂತನ ಜಾಹೀರಾತು ನೀತಿಯನ್ನು ಜಾರಿಗೆ ತರಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವಿಳಂಬಕ್ಕೆ ಕಾರಣಗಳೇನು (ವಿವರ ನೀಡುವುದು);	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೊಸ ಜಾಹೀರಾತು ನೀತಿ ಜಾರಿಗೆ ತರಲು ಉದ್ದೇಶಿಸಿದ್ದು, ಅದರನ್ವಯ ರಚಿಸಲಾದ ಜಾಹೀರಾತು ನೀತಿ ಸಮಿತಿ ಸಭೆಯ ಎಲ್ಲಾ ಸದಸ್ಯರು ಕಾಲ-ಕಾಲಕ್ಕೆ ಸಭೆ ಸೇರಿ ಸಾಧಕ-ಭಾದಕಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಅಂತಿಮ ನಿರ್ಧಾರಗಳೊಂದಿಗೆ ಹೊಸ ಜಾಹೀರಾತು ನೀತಿಯನ್ನು ರೂಪಿಸಿ ಅದಕ್ಕೆ ಅನುಗುಣವಾಗಿ ಕರಡು "BBMP Outdoor Signage and Public Messaging Bye-laws 2018" ಕ್ಕೆ ದಿನಾಂಕ: 28-08-2018 ರಂದು ಪಾಲಿಕೆಯ ಸಭೆಯಲ್ಲಿ ಅನುಮೋದನೆ ಪಡೆದು ಪಾಲಿಕೆಯ ಆಯುಕ್ತರು ಸರ್ಕಾರಕ್ಕೆ ದಿನಾಂಕ: 29-08-2018 ರಂದು ಅನುಮೋದನೆಗೆ ಸಲ್ಲಿಸಿದ್ದರು. ಇದನ್ನು ಸರ್ಕಾರವು ಪರಿಶೀಲಿಸಿ, ಪತ್ರ ಸಂಖ್ಯೆ: ನಅಇ 439 ಎಂಎನ್‌ಯು 2018, ದಿನಾಂಕ: 11-09-2018 ರಲ್ಲಿ ಕೆ.ಎಂ.ಸಿ. ಕಾಯ್ದೆ 1976ರ ಕಲಂ 425 & 426 ರನ್ವಯ ಕ್ರಮವಹಿಸುವಂತೆ ಪಾಲಿಕೆಯ ಆಯುಕ್ತರಿಗೆ ತಿಳಿಸಲಾಗಿದೆ. ಅದರನ್ವಯ ಬಿಬಿಎಂಪಿ ಆಯುಕ್ತರು ದಿನಾಂಕ: 19-09-2018ರ ಪ್ರಸ್ತಾವನೆಯೊಂದಿಗೆ "BBMP Outdoor Signage and Public Messaging Bye-laws 2018" ರ ಕರಡು ಅಧಿಸೂಚನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಸದರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರ ವಿಶೇಷ ರಾಜಪತ್ರಿಕೆಯಲ್ಲಿ ಪ್ರಕಟಿಸುವಂತೆ ಕೋರಿದ್ದರು. ಅದರಂತೆ, ದಿನಾಂಕ: 25-09-2018 ರಂದು ಕರ್ನಾಟಕ ರಾಜ್ಯಪತ್ರ ವಿಶೇಷ ರಾಜಪತ್ರಿಕೆಯಲ್ಲಿ ಪ್ರಕಟಿಸಿ, ಬಾಧಿತರಿಂದ ಸಲಹೆ/ಆಕ್ಷೇಪಣೆಗಳನ್ನು
		ಬಿಬಿಎಂಪಿ ಆಯುಕ್ತರಿಗೆ ಸಲ್ಲಿಸಲು 30 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ. ಕರಡು ಅಧಿಸೂಚನೆಗೆ ಸ್ವೀಕೃತವಾಗಿರುವ ಸಲಹೆ/ಆಕ್ಷೇಪಣೆಗಳನ್ನು ಬಿಬಿಎಂಪಿಯ ಆಯುಕ್ತರು ಪರಿಶೀಲಿಸಿ ಅಂತಿಮವಾಗಿ ಈ ಬಗ್ಗೆ ಸ್ವೀಕೃತವಾಗಿರುವ "BBMP Outdoor Signage and Public Messaging Bye-laws 2018" ರ ಬೈಲಾವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಿದ ನಂತರ, ಅದನ್ನು ಸರ್ಕಾರವು ನಿಯಮ/ ಕಾನೂನಿನನ್ವಯ ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲಾಗುವುದು.

. . . . 4 .

ಊ)	ಹಾಗಿದ್ದಲ್ಲಿ, ಜಾಹೀರಾತು ನೀತಿಯ ಕರಡು ಸಿದ್ಧಗೊಂಡಿದೆಯೇ ಎಂದಿನಿಂದ ಜಾರಿಗೆ ಬರಲಿದೆ (ಸಂಪೂರ್ಣ ವಿವರ ನೀಡುವುದು)?	ಬಿಬಿಎಂಪಿ ಆಯುಕ್ತರು ಅಂತಿಮವಾಗಿ "BBMP Outdoor Signage and Public Messaging Bye-laws 2018" ರ ಬೈಲಾವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಿದ ನಂತರ, ಅದನ್ನು ಸರ್ಕಾರವು ನಿಯಮ/ ಕಾನೂನಿನನ್ವಯ ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ನಅಇ 637 ಎಂಎನ್‌ಯು 2018

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು

ಲಿಖಿತ/ಗುರುತಿಲ್ಲದ ಪ್ರಶ್ನೆ ಸಂ: 173ಕ್ಕೆ ಅನುಬಂಧಗಳು.

ಅನುಬಂಧ-1

ರಾಜ್ಯ ಮುಖ್ಯ ನ್ಯಾಯಾಲಯ ವಿಭಾಗೀಯ ಪೀಠವು ಬಿಬಿಎಂಪಿಗೆ ಮೇಲ್ವಿಚಾರಣೆ ನಡೆಸಿದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಅನಧಿಕೃತ ಫ್ಲೆಕ್ಸ್/ಬ್ಯಾನರ್, ಗೋಡೆ ಬರಹ, ಬಿತ್ತಿಪತ್ರ ಇನ್ನಿತರೆ ಮತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರಗಳನ್ನು ವಲಯ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ವಲಯ:ಪೂರ್ವ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	ಅನಧಿಕೃತ ಫ್ಲೆಕ್ಸ್/ಬ್ಯಾನರ್ ಜಾಹೀರಾತುಗಳನ್ನು ತೆರವುಗೊಳಿಸಿರುವ ಸಂಖ್ಯೆ	ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ಸಂಖ್ಯೆ	
			ಸಂಸ್ಥೆ / ಮಾಲಿಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ	ಪಾಲಿಕೆಯಿಂದ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ
1	ಶಾಂತಿನಗರ ವಿಧಾನಸಭಾ ಕ್ಷೇತ್ರ	1158	357	154
2	ಶಿವಾಜಿನಗರ ವಿಧಾನಸಭಾ ಕ್ಷೇತ್ರ	870		
3	ಸಿ.ವಿ.ರಾಮನ್‌ನಗರ ವಿಧಾನಸಭಾ ಕ್ಷೇತ್ರ	552		
4	ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ	1005		
5	ಪುಲಕೇಶಿನಗರ ವಿಧಾನಸಭಾ ಕ್ಷೇತ್ರ	948		
6	ಹೆಬ್ಬಾಳ ವಿಧಾನಸಭಾ ಕ್ಷೇತ್ರ	301		
	ಒಟ್ಟು	4834	357	154

ಜಂಟಿ ಆಯುಕ್ತರು(ಹಣಕಾಸು/ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅನುಬಂಧ-2

ರಾಜ್ಯ ಮುಖ್ಯ ನ್ಯಾಯಾಲಯ ವಿಭಾಗೀಯ ಪೀಠವು ಬಿಬಿಎಂಪಿಗೆ ಮೇಲ್ವಿಚಾರಣೆ ನಡೆಸಿದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಅನಧಿಕೃತ ಫ್ಲೆಕ್ಸ್/ಬ್ಯಾನರ್, ಗೋಡೆ ಬರಹ, ಭಿತ್ತಿಪತ್ರ ಇನ್ನಿತರೆ ಮತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರಗಳನ್ನು ವಲಯ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ವಲಯ:ಪಶ್ಚಿಮ

ಕ್ರಸಂ.	ವಿಧಾನ ಸಭಾ ಕ್ಷೇತ್ರ	ಅನಧಿಕೃತ ಫ್ಲೆಕ್ಸ್/ಬ್ಯಾನರ್ ಜಾಹೀರಾತುಗಳನ್ನು ತೆರವುಗೊಳಿಸಿರುವ ಸಂಖ್ಯೆ	ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ಸಂಖ್ಯೆ	
			ಸಂಸ್ಥೆ / ಮಾಲಿಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ	ಪಾಲಿಕೆಯಿಂದ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ
1	ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ	110		
2	ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರ	128		
3	ರಾಜಾಜಿನಗರ ವಿಧಾನಸಭಾ ಕ್ಷೇತ್ರ	175		
4	ಗಾಂಧಿನಗರ ವಿಧಾನಸಭಾ ಕ್ಷೇತ್ರ	145	89	24
5	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ	604		
6	ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ	280		
	ಒಟ್ಟು	**1442**	**89**	**24**

ಜಂಟಿ ಆಯುಕ್ತರು(ಹಣಕಾಸು/ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅನುಬಂಧ-3

ರಾಜ್ಯ ಮುಖ್ಯ ನ್ಯಾಯಾಲಯ ವಿಭಾಗೀಯ ಪೀಠವು ಬಿಬಿಎಂಪಿಗೆ ಮೇಲ್ವಿಚಾರಣೆ ನಡೆಸಿದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಅನಧಿಕೃತ ಫ್ಲೆಕ್ಸ್/ಬ್ಯಾನರ್, ಗೋಡೆ ಬರಹ, ಭಿತ್ತಿಪತ್ರ ಇನ್ನಿತರೆ ಮತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರಗಳನ್ನು ವಲಯ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ವಲಯ:ದಕ್ಷಿಣ

ಕ್ರಸಂ.	ವಿಧಾನ ಸಭಾ ಕ್ಷೇತ್ರ	ಅನಧಿಕೃತ ಫ್ಲೆಕ್ಸ್/ಬ್ಯಾನರ್ ಜಾಹೀರಾತುಗಳನ್ನು ತೆರವುಗೊಳಿಸಿರುವ ಸಂಖ್ಯೆ	ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರ	
			ಸಂಸ್ಥೆ / ಮಾಲೀಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ	ಪಾಲಿಕೆಯಿಂದ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ
1	ಬಸವನಗುಡಿ ವಿಧಾನಸಭಾ ಕ್ಷೇತ್ರ	86	234	61
2	ಪದ್ಮನಾಭನಗರ ವಿಧಾನಸಭಾ ಕ್ಷೇತ್ರ	264		
3	ಜಯನಗರ ವಿಧಾನಸಭಾ ಕ್ಷೇತ್ರ	312		
4	ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ	352		
5	ವಿಜಯನಗರ ವಿಧಾನಸಭಾ ಕ್ಷೇತ್ರ	405		
6	ಬಿ.ಟಿ.ಎಂ ಲೇಔಟ್ ವಿಧಾನಸಭಾ ಕ್ಷೇತ್ರ	238		
	ಒಟ್ಟು	1657	234	61

ಜಂಟಿ ಆಯುಕ್ತರು(ಹಣಕಾಸು/ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅನುಬಂಧ-4

ರಾಜ್ಯ ಮುಖ್ಯ ನ್ಯಾಯಾಲಯ ವಿಭಾಗೀಯ ಪೀಠವು ಬಿಬಿಎಂಪಿಗೆ ಮೇಲ್ವಿಚಾರಣೆ ನಡೆಸಿದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಅನಧಿಕೃತ ಫ್ಲೆಕ್ಸ್/ಬ್ಯಾನರ್, ಗೋಡೆ ಬರಹ, ಚಿತ್ರಪತ್ರ ಇನ್ನಿತರೆ ಮತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರಗಳನ್ನು ವಲಯ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ವಲಯ:ಬೊಮ್ಮನಹಳ್ಳಿ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	ಅನಧಿಕೃತ ಫ್ಲೆಕ್ಸ್/ಬ್ಯಾನರ್ ಜಾಹೀರಾತುಗಳನ್ನು ತೆರವುಗೊಳಿಸಿರುವ ಸಂಖ್ಯೆ	ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ಸಂಖ್ಯೆ	
			ಸಂಸ್ಥೆ / ಮಾಲೀಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ	ಪಾಲಿಕೆಯಿಂದ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ
1	ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ	1330	110	04
2	ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ	719		
	ಒಟ್ಟು	**2049**	**110**	**04**

ಜಂಟಿ ಆಯುಕ್ತರು(ಹಣಕಾಸು/ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅನುಬಂಧ–5

ರಾಜ್ಯ ಮುಖ್ಯ ನ್ಯಾಯಾಲಯ ವಿಭಾಗೀಯ ಪೀಠವು ಬಿಬಿಎಂಪಿಗೆ ಮೇಲ್ವಿಚಾರಣೆ ನಡೆಸಿದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಅನಧಿಕೃತ ಫ್ಲೆಕ್ಸ್/ಬ್ಯಾನರ್, ಗೋಡೆ ಬರಹ, ಬಿತ್ತಿಪತ್ರ ಇನ್ನಿತರೆ ಮತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರಗಳನ್ನು ವಲಯ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ವಲಯ:ಮಹದೇವಪುರ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	ಅನಧಿಕೃತ ಫ್ಲೆಕ್ಸ್/ಬ್ಯಾನರ್ ಜಾಹೀರಾತುಗಳನ್ನು ತೆರವುಗೊಳಿಸಿರುವ ಸಂಖ್ಯೆ	ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರ	
			ಸಂಸ್ಥೆ / ಮಾಲೀಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ	ಪಾಲಿಕೆಯಿಂದ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ
1	ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ	2640	397	38
2	ಮಹದೇವಪುರ ವಿಧಾನಸಭಾ ಕ್ಷೇತ್ರ	1812		
	ಒಟ್ಟು	**4452**	**397**	**38**

ಜಂಟಿ ಆಯುಕ್ತರು(ಹಣಕಾಸು/ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅನುಬಂಧ-6

ರಾಜ್ಯ ಮುಖ್ಯ ನ್ಯಾಯಾಲಯ ವಿಭಾಗೀಯ ಪೀಠವು ಬಿಬಿಎಂಪಿಗೆ ಮೇಲ್ವಿಚಾರಣೆ ನಡೆಸಿದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಅನಧಿಕೃತ ಫ್ಲೆಕ್ಸ್/ಬ್ಯಾನರ್, ಗೋಡೆ ಬರಹ, ಚಿತ್ರಿಪತ್ರ ಇನ್ನಿತರೆ ಮತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರಗಳನ್ನು ವಲಯ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ವಲಯ:ಯಲಹಂಕ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	ಅನಧಿಕೃತ ಫ್ಲೆಕ್ಸ್/ಬ್ಯಾನರ್ ಜಾಹೀರಾತುಗಳನ್ನು ತೆರವುಗೊಳಿಸಿರುವ ಸಂಖ್ಯೆ	ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರ	
			ಸಂಸ್ಥೆ / ಮಾಲೀಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ	ಪಾಲಿಕೆಯಿಂದ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ
1	ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ	1586	77	04
2	ಯಲಹಂಕ ವಿಧಾನಸಭಾ ಕ್ಷೇತ್ರ	319		
	ಒಟ್ಟು	**1905**	**77**	**04**

ಜಂಟಿ ಆಯುಕ್ತರು(ಹಣಕಾಸು/ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

6

ಅನುಬಂಧ-7

ರಾಜ್ಯ ಮುಖ್ಯ ನ್ಯಾಯಾಲಯ ವಿಭಾಗೀಯ ಪೀಠವು ಬಿಬಿಎಂಪಿಗೆ ಮೇಲ್ವಿಚಾರಣೆ ನಡೆಸಿದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಅನಧಿಕೃತ ಫ್ಲೆಕ್ಸ್/ಬ್ಯಾನರ್, ಗೋಡೆ ಬರಹ, ಬಿತ್ತಿಪತ್ರ ಇನ್ನಿತರೆ ಮತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರಗಳನ್ನು ವಲಯ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ವಲಯ:ರಾಜರಾಜೇಶ್ವರಿನಗರ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	ಅನಧಿಕೃತ ಫ್ಲೆಕ್ಸ್/ಬ್ಯಾನರ್ ಜಾಹೀರಾತುಗಳನ್ನು ತೆರವುಗೊಳಿಸಿರುವ ಸಂಖ್ಯೆ	ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ಸಂಖ್ಯೆ	
			ಸಂಸ್ಥೆ / ಮಾಲಿಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ	ಪಾಲಿಕೆಯಿಂದ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ
1	ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ	3297	76	04
2	ಯಶವಂತಪುರ ವಿಧಾನಸಭಾ ಕ್ಷೇತ್ರ	1551		
	ಒಟ್ಟು	**4848**	**76**	**04**

ಜಂಟಿ ಆಯುಕ್ತರು(ಹಣಕಾಸು/ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅನುಬಂಧ-8

ರಾಜ್ಯ ಮುಖ್ಯ ನ್ಯಾಯಾಲಯ ವಿಭಾಗೀಯ ಪೀಠವು ಬಿಬಿಎಂಪಿಗೆ ಮೇಲ್ವಿಚಾರಣೆ ನಡೆಸಿದಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಅನಧಿಕೃತ ಫ್ಲೆಕ್ಸ್/ಬ್ಯಾನರ್, ಗೋಡೆ ಬರಹ, ಚಿತ್ರಪತ್ರ ಇನ್ನಿತರೆ ಮತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರಗಳನ್ನು ವಲಯ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ವಲಯ:ದಾಸರಹಳ್ಳಿ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	ಅನಧಿಕೃತ ಫ್ಲೆಕ್ಸ್/ಬ್ಯಾನರ್ ಜಾಹೀರಾತುಗಳನ್ನು ತೆರವುಗೊಳಿಸಿರುವ ಸಂಖ್ಯೆ	ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವ ವಿವರ	
			ಸಂಸ್ಥೆ / ಮಾಲೀಕರು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ	ಪಾಲಿಕೆಯಿಂದ ತೆರವುಗೊಳಿಸಿರುವ ಜಾಹೀರಾತು ಫಲಕಗಳ ಸಂಖ್ಯೆ
1	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ	1294	02	01
	ಒಟ್ಟು	**1294**	**02**	**01**

(signature)

ಜಂಟಿ ಆಯುಕ್ತರು(ಹಣಕಾಸು/ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	45
2	ಸದಸ್ಯರ ಹೆಸರು	:	ಶ್ರೀ ಎಸ್. ಸುರೇಶ್ ಕುಮಾರ್
3	ಉತ್ತರಿಸುವ ದಿನಾಂಕ	:	12-12-2018
4	ಉತ್ತರಿಸುವವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಬೀದಿ ವ್ಯಾಪಾರಿಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)	ದೀನದಯಾಳ್-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯ ನಗರ ಬೀದಿಬದಿ ವ್ಯಾಪಾರಿಗಳಿಗೆ ಬೆಂಬಲ ಉಪ ಘಟಕದಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳ ವ್ಯಾಪ್ತಿಯಲ್ಲಿ ಸಮೀಕ್ಷೆಯ ಮುಖಾಂತರ ನಗರ ಬೀದಿ ವ್ಯಾಪಾರಿಗಳನ್ನು ಗುರುತಿಸಲಾಗಿರುತ್ತದೆ. ವಿಧಾನಸಭಾ ಕ್ಷೇತ್ರವಾರು ಗುರುತಿಸಿರುವ ನಗರ ಬೀದಿ ವ್ಯಾಪಾರಿಗಳ ವಿವರವನ್ನು **ಅನುಬಂಧದಲ್ಲಿ** ನೀಡಿದೆ.
ಆ)	ಬೀದಿ ವ್ಯಾಪಾರಿಗಳ ಹಿತ ರಕ್ಷಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳು ಯಾವುವು; ಈ ಯೋಜನೆಗಳು ಕಾರ್ಯರೂಪಕ್ಕೆ ಬಂದಿವೆಯೇ; ಯೋಜನೆಗಳು ಯಶಸ್ವಿಯಾಗಿದೆಯೇ;	ಬೀದಿ ಬದಿ ವ್ಯಾಪಾರಿಗಳಿಗೆ ಬೆಂಬಲ ಉಪಘಟಕವನ್ನು ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯಡಿ (ಡೇ-ನಲ್ಮ್) ಕೇಂದ್ರ ಮತ್ತು ರಾಜ್ಯ ಶೇ.60:40ರ ಅನುಪಾತದಲ್ಲಿ ಅನುದಾನ ಹಂಚಿಕೆ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ.
ಇ)	ಕೇಂದ್ರ ಸರ್ಕಾರ ಬೀದಿ ವ್ಯಾಪಾರ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಕಾಯ್ದೆಯಲ್ಲಿರುವ ಪ್ರಮುಖ ಅಂಶಗಳ ವಿವರ ನೀಡುವುದು)	ಬಂದಿದೆ. ಕಾಯ್ದೆಯಲ್ಲಿರುವ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತದೆ. • ತಾತ್ಕಾಲಿಕ ಪಟ್ಟಣ ಮಾರಾಟ ಸಮಿತಿ ರಚಿಸುವುದು. • ಪಟ್ಟಣ ಮಾರಾಟ ವ್ಯಾಪಾರ ಸಮಿತಿ ರಚಿಸುವುದು. • ಬೀದಿಬದಿ ವ್ಯಾಪಾರಿಗಳನ್ನು ಸಮೀಕ್ಷೆ ಮೂಲಕ ಗುರುತಿಸುವುದು. • ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರ ವಿತರಿಸುವುದು. • ಕುಂದು ಕೊರತೆ ನಿವಾರಣಾ ಸಮಿತಿಯನ್ನು ರಚಿಸುವುದು. • ಅಪೀಲು ವಿಚಾರಣೆ ಮಾಡಲು ಅಪೀಲು ಸಮಿತಿ ರಚಿಸುವುದು. • ಮಾರಾಟ ಯೋಜನೆ (Vending Plan) ಅಭಿವೃದ್ಧಿಪಡಿಸುವುದು. • ನಗರದ ಬೀದಿ ಬದಿ ವ್ಯಾಪಾರಿಗಳಿಗೆ ಹಕ್ಕು ಮತ್ತು ಕರ್ತವ್ಯಗಳನ್ನು ನಿಗಧಿಪಡಿಸುವುದು.
ಈ)	ಹಾಗಿದ್ದಲ್ಲಿ, ರಾಜ್ಯದಲ್ಲಿ ಈ ಕಾಯ್ದೆ ಜಾರಿಗೆ ಬಂದಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು; ಕಾಯ್ದೆಯನ್ನು ಜಾರಿಗೆ ತರಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು).	ಬೀದಿ ಬದಿ ವ್ಯಾಪಾರಿಗಳಿಗೆ ಬೆಂಬಲ (ನಿಯಂತ್ರಣ ಹಾಗೂ ಜೀವನೋಪಾಯ) ಕಾಯ್ದೆಯನ್ವಯ ಅಂತಿಮ ನಿಯಮಗಳನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ರೂಪಿಸಿದ್ದು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಇಲಾಖೆಯ ಅನುಮೋದನೆಗೆ ಕಳುಹಿಸಲಾಗಿದೆ. ಈ ಕರಡು ನಿಯಮಗಳಿಗೆ ಅನುಮೋದನೆ ದೊರೆತ ನಂತರ ನಿಯಮಗಳನ್ವಯ ಕಾಯ್ದೆಯನ್ನು ಜಾರಿಗೆ ತರಲಾಗುವುದು.

ಸಂಖ್ಯೆ: ನಅಇ 586 ಎಂಎನ್‌ಜಿ 2018

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು

ಅನುಬಂಧ–ಅ

ಶ್ರೀ. ಎಸ್. ಸುರೇಶ್ ಕುಮಾರ್ (ರಾಜಾಜಿನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:ಪ್ರಶಾವಿಸ/15ನೇವಿಸ/2ಅ/ಪ್ರಸಂ.45/2018, ದಿನಾಂಕ:30–11–2018

ಕ್ರ.ಸಂ.	ವಿಧಾನಸಭಾ ಕ್ಷೇತ್ರದ ಹೆಸರು	ಸಮೀಕ್ಷೆಯ ಮುಖಾಂತರ ಗುರುತಿಸಿರುವ ಬೀದಿವ್ಯಾಪಾರಿಗಳ ಸಂಖ್ಯೆ
1	ಯಲಹಂಕ	765
2	ಬ್ಯಾಟರಾಯನ ಪುರ	1140
3	ದಾಸರಹಳ್ಳಿ	1892
4	ಹೆಬ್ಬಾಳ	578
5	ರಾಜರಾಜೇಶ್ವರಿ ನಗರ	1498
6	ಸರ್ವಜ್ಞ ನಗರ	411
7	ಕೆ.ಆರ್.ಪುರಂ	884
8	ಪುಲಕೇಶಿನಗರ	242
9	ಮಲ್ಲೇಶ್ವರಂ	0
10	ಯಶವಂತಪುರ	1134
11	ಮಹಾಲಕ್ಷ್ಮೀ ಬಡಾವಣೆ	1115
12	ಸಿವಿ ರಾಮನ್ ನಗರ	509
13	ಶಿವಾಜಿನಗರ	986
14	ಗಾಂಧಿನಗರ	1196
15	ಶಾಂತಿನಗರ	824
16	ರಾಜಾಜಿನಗರ	744
17	ಗೋವಿಂದರಾಜನಗರ	832
18	ಚಿಕ್ಕಪೇಟೆ	543
19	ವಿಜಯನಗರ	1055
20	ಚಾಮರಾಜಪೇಟೆ	1594
21	ಬಿಟಿಎಂ ಬಡಾವಣೆ	441
22	ಮಹದೇವಪುರ	1536
23	ಬಸವನಗುಡಿ	398
24	ಪದ್ಮನಾಭನಗರ	397
25	ಜಯನಗರ	1154
26	ಬೊಮ್ಮನಹಳ್ಳಿ	1452
27	ಬೆಂಗಳೂರು ದಕ್ಷಿಣ	869
28	ಆನೇಕಲ್ (ಸಿಂಗಸಂದ್ರ ವಾರ್ಡ್ (ಭಾಗಶಃ)	474
ಒಟ್ಟು		**24663**

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	865
2	ಸದಸ್ಯರ ಹೆಸರು	:	ಶ್ರೀ ಅಖಂಡ ಶ್ರೀನಿವಾಸಮೂರ್ತಿ.ಆರ್
3	ಉತ್ತರಿಸುವ ದಿನಾಂಕ	:	12-12-2018
4	ಉತ್ತರಿಸುವವರು	:	ಮಾನ್ಯ ಉಪಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಕ್ಷಣಾ ಇಲಾಖೆಯ ವಶದಲ್ಲಿರುವ ಬಿ.ಬಿ.ಎಂ.ಪಿ.ಗೆ ಸೇರಿದ ಯಾವ ಯಾವ ರಸ್ತೆಗಳನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಹಾಗೂ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ; (ವಿವರ ನೀಡುವುದು)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬರುವ (1) ಪುಲಿಕೇಶಿನಗರ ವಿಭಾಗ ವ್ಯಾಪ್ತಿಯಲ್ಲಿ ಕಾವಲ್ ಭೈರಸಂದ್ರದಿಂದ ಮೋದಿ ಗಾರ್ಡನ್ ಮತ್ತು ಜೆ.ಸಿ. ನಗರದಿಂದ ಕಾವಲ್ ಬೈರಸಂದ್ರವರೆಗಿನ ಬಿಬಿಎಂಪಿಗೆ ಸೇರಿದ ರಸ್ತೆಯು ರಕ್ಷಣಾ ಇಲಾಖೆಯ ವಶದಲ್ಲಿದ್ದು, ಸದರಿ ರಸ್ತೆಯು ಈವರೆಗೂ ಸಾರ್ವಜನಿಕ ಅನುಕೂಲಕ್ಕಾಗಿ ಹಾಗೂ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಲಾಗಿರುವುದಿಲ್ಲ. (2) ಯಲಹಂಕ ವಲಯದ ವಾರ್ಡ್ ಸಂಖ್ಯೆ: 11 ರಲ್ಲಿ ಗಂಗಮ್ಮ ವೃತ್ತದಿಂದ ಎಂ.ಎಸ್.ಪಾಳ್ಯ ವೃತ್ತದವರೆಗಿನ ರಸ್ತೆಯು ಜಾಲಹಳ್ಳಿ ಏರ್‌ಫೋರ್ಸ್ ಸ್ಟೇಷನ್ ರಕ್ಷಣಾ ಇಲಾಖೆಯ ವಶದಲ್ಲಿದ್ದು, ಸಾರ್ವಜನಿಕರ ಅನುಕೂಲಕ್ಕಾಗಿ ವಾಹನ ಸಂಚಾರಕ್ಕಾಗಿ ಮುಕ್ತವಾಗಿರುತ್ತದೆ. ಆದರೆ, ಸದರಿ ರಸ್ತೆಯನ್ನು ಮುಚ್ಚಲು ರಕ್ಷಣಾ ಇಲಾಖೆ ವತಿಯಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ RFA 493/2003 ಅನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:21-06-2018 ರಂದು ನಡೆದ ವಿಚಾರಣೆ ಸಮಯದಲ್ಲಿ ಹಾಲಿ ಇರುವ ರಸ್ತೆಗೆ ಪರ್ಯಾಯವಾಗಿ ಬೇರೆ ರಸ್ತೆಯನ್ನು ನಿರ್ಮಿಸಬಹುದೇ ಎನ್ನುವ ಬಗ್ಗೆ (feasibility) ಪರಿಶೀಲಿಸಿ ವರದಿ ನೀಡಲು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ನಿರ್ದೇಶನ ನೀಡಿತ್ತು. ಅದರಂತೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ದಿನಾಂಕ:21-06-2018 ಮತ್ತು 05-07-2018 ರಂದು ಬಿ.ಡಿ.ಎ., ಮತ್ತು ಏರ್‌ಪೋರ್ಸ್ / ರಕ್ಷಣಾ ಇಲಾಖೆಯ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳೊಂದಿಗೆ ಚರ್ಚಿಸಿರುತ್ತಾರೆ. ದಿನಾಂಕ: 21-06-2018 ರಂದು ನಡೆದ ಸಭೆಯಲ್ಲಿ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಪರ್ಯಾಯ ರಸ್ತೆಯನ್ನು ಜಾರಕಬಂಡೆಕಾವಲ್ ಸರ್ವೆ ನಂ.33, 45,46, ಮತ್ತು 47 ರಲ್ಲಿ ನಿರ್ಮಿಸಿದಲ್ಲಿ ಸದರಿ ಜಾಗವು ವ್ಯಾಜ್ಯದಲ್ಲಿರುವುದರಿಂದ, ವ್ಯಾಜ್ಯವನ್ನು ಇತ್ಯರ್ಥಪಡಿಸಲು ಧೀರ್ಘ ಕಾಲ ತೆಗೆದುಕೊಳ್ಳುವುದರಿಂದ, ಇದರ ಬದಲಿಗೆ ಏರ್‌ಫೋರ್ಸ್ ರವರಿಗೆ ಸೇರಿದ ಪ್ರಸ್ತುತ ಇರುವ ಜಾಗದ ಬೌಂಡರಿಯಲ್ಲಿಯೇ ನಿರ್ಮಿಸುವುದು ಸೂಕ್ತವೆಂದು ಅಭಿಪ್ರಾಯಪಡಲಾಯಿತು. ಈ ಬಗ್ಗೆ ರಕ್ಷಣಾ ಇಲಾಖೆಯ ಅಧಿಕಾರಿಗಳು ವಿಷಯವನ್ನು ತಮ್ಮ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ, ನಂತರ ತಮ್ಮ ಸಹಮತಿಯನ್ನು ವ್ಯಕ್ತಪಡಿಸುವುದಾಗಿ ತಿಳಿಸಿರುತ್ತಾರೆ. ಆದರೆ, ರಕ್ಷಣಾ ಇಲಾಖೆಯಿಂದ ಇದುವರೆವಿಗೂ ಯಾವುದೇ ಮಾಹಿತಿ ಬಂದಿರುವುದಿಲ್ಲ. (3) ಪಾಲಿಕೆ ವ್ಯಾಪ್ತಿಯಲ್ಲಿ ಆರ್.ಎನ್.ಎಸ್ – ಗೊರಗುಂಟೆಪಾಳ್ಯ ರಿಂಗ್ ರಸ್ತೆಯಿಂದ ಪ್ಯಾಟೀನಿಯಂ ಸಿಟಿ-ಜಲ ಭವನ್ ರಸ್ತೆಯನ್ನು 2018 ರಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.

ಆ	ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಮೋದಿ ಗಾರ್ಡನ್ ಸವರ್‌ಲೈನ್ ರಸ್ತೆಗಳು ರಕ್ಷಣಾ ಇಲಾಖೆಯ ವಶದಲ್ಲಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸದರಿ ರಸ್ತೆಗಳನ್ನು ಸಾರ್ವಜನಿಕರ ಹಾಗೂ ವಾಹನಗಳ ಸಂಚಾರಕ್ಕೆ ಅನುಕೂಲವಾಗಲು ಸರ್ಕಾರವು ತೆಗೆದುಕೊಳ್ಳುವ ಕ್ರಮವೇನು; (ಮಾಹಿತಿ ನೀಡುವುದು)	ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಮೋದಿ ಗಾರ್ಡನ್ ಸವರ್‌ಲೈನ್ ರಸ್ತೆಗಳು ರಕ್ಷಣಾ ಇಲಾಖೆಯ ವಶದಲ್ಲಿರುವ ಜಾಗವನ್ನು ಬಿ.ಬಿ.ಎಂ.ಪಿಗೆ ವಶಪಡಿಸಿಕೊಳ್ಳಲು ದಿನಾಂಕ: 04-08-2018 ರಂದು ಮಾನ್ಯ ಕೇಂದ್ರ ರಕ್ಷಣಾ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ರಕ್ಷಣಾ ಇಲಾಖೆಯ ಜಮೀನಿನ ಒಟ್ಟು 3488.39 Sq.mt, ಅನ್ನು ಮೋದಿ ಗಾರ್ಡನ್ ಬಡಾವಣೆಯಲ್ಲಿ ವಿವಿಧ ಕಾರಣಾಂತರಗಳಿಂದ ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.
ಇ	ಸದರಿ ರಸ್ತೆಗಳನ್ನು ಸಾರ್ವಜನಿಕರ ಹಾಗೂ ವಾಹನಗಳ ಸಂಚಾರಕ್ಕೆ ಯಾವಾಗ ಮುಕ್ತಗೊಳಿಸಲಾಗುವುದು? (ವಿವರ ನೀಡುವುದು)	ಜೆ.ಸಿ. ನಗರದಿಂದ ಕಾವಲ್ ಬೈರಸಂದ್ರವರೆಗಿನ ರಸ್ತೆಗೆ ಸಂಬಂಧಿಸಿದಂತೆ ದಿನಾಂಕ: 04-08-2018 ರಂದು ಮಾನ್ಯ ಕೇಂದ್ರ ರಕ್ಷಣಾ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ರಸ್ತೆ ನಿರ್ಮಿಸಲು ಒಟ್ಟು 1.6 ಎಕರೆ (6475.20 Sq.mt) ಅವಶ್ಯಕತೆಯಿದ್ದು, ಸದರಿ ಜಮೀನನ್ನು ಹಸ್ತಾಂತರಿಸಿದ ನಂತರ, ರಸ್ತೆಯನ್ನು ಸಾರ್ವಜನಿಕರ ಹಾಗೂ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು. ಗಂಗಮ್ಮ ವೃತ್ತದಿಂದ ಎಂ.ಎಸ್.ಪಾಳ್ಯ ವೃತ್ತದವರೆಗಿನ ರಸ್ತೆಯು ವಾಹನಕ್ಕೆ 2018 ರಿಂದ ಮುಕ್ತವಾಗಿರುತ್ತದೆ.

ಸಂಖ್ಯೆ: ನಅಇ 599 ಎಂಎನ್‌ವೈ 2018

(ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	866
2	ಸದಸ್ಯರ ಹೆಸರು	:	ಶ್ರೀ ಅಖಂಡ ಶ್ರೀನಿವಾಸಮೂರ್ತಿ.ಆರ್
3	ಉತ್ತರಿಸುವ ದಿನಾಂಕ	:	12-12-2018
4	ಉತ್ತರಿಸುವವರು	:	ಮಾನ್ಯ ಉಪಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ದಿಣ್ಣೂರು ರಸ್ತೆಯಿಂದ ಡಾ॥ ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜಿನವರೆಗೂ ರಸ್ತೆ ಅಗಲೀಕರಣಕ್ಕಾಗಿ 2014-15ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಹಾಗಿದ್ದಲ್ಲಿ, ಸದರಿ ರಸ್ತೆಯ ಅಗಲೀಕರಣದ ಕಾಮಗಾರಿಯನ್ನು ಕಳೆದ ಮೂರು ವರ್ಷಗಳಿಂದ ಕೈಗೊಳ್ಳದಿರಲು ಕಾರಣವೇನು; (ವಿವರ ನೀಡುವುದು)	**<u>ದಿಣ್ಣೂರು ರಸ್ತೆ:-</u>** ದಿಣ್ಣೂರು ಮುಖ್ಯರಸ್ತೆಯನ್ನು ಪರಿಷ್ಕೃತ ಮಹಾನಕ್ಷೆ-2015 ರಂತೆ 24.00ಮೀ ಅಗಲೀಕರಣಗೊಳಿಸಲು ಪ್ರಸ್ತಾಪಿಸಿದ್ದು, ರಸ್ತೆ ಅಗಲೀಕರಣಕ್ಕೆ ಅವಶ್ಯವಿರುವ ಸ್ವತ್ತುಗಳನ್ನು ಟಿ.ಡಿ.ಆರ್ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿ ಒಟ್ಟು 601 ಸ್ವತ್ತುಗಳನ್ನು ಗುರುತಿಸಿದ್ದು, ಅವುಗಳಲ್ಲಿ 3 ಸರ್ಕಾರಿ ಸ್ವತ್ತುಗಳ ಮತ್ತು 598 ಖಾಸಗಿ ಸ್ವತ್ತುಗಳ ಒಟ್ಟು 43033.02 ಚ.ಮೀ ಗುರುತಿಸಿ ಟಿ.ಡಿ.ಆರ್ ನಿಯಮಾವಳಿ ಅನ್ವಯ ನಮೂನೆ-1 ಅಧಿಸೂಚನೆ ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ. ಇತರೆ ರಸ್ತೆ ಅಗಲೀಕರಣ ಯೋಜನೆಗಳ ಪ್ರಕರಣಗಳಲ್ಲಿ ಉದ್ಭವಿಸಿರುವಂತೆ ಈ ಪ್ರಕರಣದಲ್ಲೂ ಖಾಸಗಿ ಸ್ವತ್ತಿನ ಮಾಲೀಕರು ಟಿ.ಡಿ.ಆರ್ ಅನ್ವಯ ಭೂಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸುತ್ತಿರುತ್ತಾರೆ ಹಾಗೂ ಮೆಟ್ರೋ ಯೋಜನೆಯಲ್ಲಿ ನೀಡಲಾಗುತ್ತಿರುವಂತೆ ಧನ ರೂಪದಲ್ಲಿ ಭೂಪರಿಹಾರ ನೀಡಲು ಬೇಡಿಕೆಯಿಡುತ್ತಿರುವುದರಿಂದ, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ. ಆದ್ದರಿಂದ, ರಸ್ತೆ ಅಗಲೀಕರಣ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

ಇ	2014-15ನೇ ಸಾಲಿನ ಆಯವ್ಯಯದಲ್ಲಿ ಸದರಿ ರಸ್ತೆಯ ಅಗಲೀಕರಣಕ್ಕಾಗಿ ಮೀಸಲಿಟ್ಟಿದ ಅನುದಾನವೆಷ್ಟು; ಸದರಿ ಕಾಮಗಾರಿಯನ್ನು ಕೈಗೊಳ್ಳಲು ಇರುವ ಅಡೆತಡೆಗಳೇನು; (ಮಾಹಿತಿ ನೀಡುವುದು)	2015-16ನೇ ಸಾಲಿನ ಸರ್ಕಾರದ ಆಯವ್ಯಯ ಭಾಷಣದ ಕಂಡಿಕೆ(344)ರಲ್ಲಿ ಘೋಷಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 279 ಎಸ್‌ಎಫ್‌ಸಿ 2015, ದಿನಾಂಕ: 08-01-2016ರಲ್ಲಿ ಈ ರಸ್ತೆಯ ಅಗಲೀಕರಣಕ್ಕೆ ರೂ.50.00 ಕೋಟಿ ಅನುದಾನ ನಿಗಧಿಪಡಿಸಲಾಗಿರುತ್ತದೆ. ರಸ್ತೆ ಅಗಲೀಕರಣಕ್ಕೆ ಅವಶ್ಯವಿರುವ ಸ್ವತ್ತುಗಳನ್ನು ಟಿ.ಡಿ.ಆರ್ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿ ಒಟ್ಟು 601 ಸ್ವತ್ತುಗಳನ್ನು ಗುರುತಿಸಿದ್ದು, ಅವುಗಳಲ್ಲಿ 3 ಸರ್ಕಾರಿ ಸ್ವತ್ತುಗಳ ಮತ್ತು 598 ಖಾಸಗಿ ಸ್ವತ್ತುಗಳ ಒಟ್ಟು ವಿಸ್ತೀರ್ಣ 43033.02 ಚ.ಮೀ.ಗಳಾಗಿದ್ದು, ಸದರಿ ಪ್ರಕರಣದಲ್ಲೂ ಖಾಸಗಿ ಸ್ವತ್ತಿನ ಮಾಲೀಕರು ಟಿ.ಡಿ.ಆರ್ ಅನ್ವಯ ಭೂಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದರಿಂದ ಮತ್ತು ಮೆಟ್ರೋ ಯೋಜನೆಯಲ್ಲಿ ನೀಡಲಾಗುತ್ತಿರುವಂತೆ ಧನ ರೂಪದಲ್ಲಿ ಭೂಪರಿಹಾರ ನೀಡಲು ಬೇಡಿಕೆಯಿಡುತ್ತಿರುವುದರಿಂದ, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲಾಗಿರುವುದಿಲ್ಲ.
ಈ	ಸದರಿ ರಸ್ತೆಯ ಅಗಲೀಕರಣದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು)	ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ರಸ್ತೆ ಅಗಲೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 601 ಎಂಎನ್‌ವೈ 2018

(ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	88
2	ಸದಸ್ಯರ ಹೆಸರು	:	ಡಾ|| ಅಶ್ವಥ್ ನಾರಾಯಣ.ಸಿ.ಎನ್
3	ಉತ್ತರಿಸುವ ದಿನಾಂಕ	:	12-12-2018
4	ಉತ್ತರಿಸುವವರು	:	ಮಾನ್ಯ ಉಪಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಮಲ್ಲೇಶ್ವರಂ ಕೋದಂಡರಾಮಪುರದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಶಾಲಾ ಕಟ್ಟಡದಲ್ಲಿ ರಾಜೀವ್‌ಗಾಂಧಿ ಕಾನೂನು ಕಾಲೇಜು ನಡೆಸಲು ಸರ್ಕಾರದಿಂದ ಅನುಮತಿ ನೀಡಲಾಗಿದೆಯೇ (ಆದೇಶಗಳೊಂದಿಗೆ ಪೂರ್ಣ ಮಾಹಿತಿ ನೀಡುವುದು);	ಸರ್ಕಾರದ ಆದೇಶ ಸಂಖ್ಯೆ: ವನಇ 209 ಎಂಎನ್‌ವೈ 1993, ದಿನಾಂಕ:18-08-1993ರ ಆದೇಶದಂತೆ ಕಾಲೇಜಿಗೆ ಕಟ್ಟಡವನ್ನು 09 ವರ್ಷಗಳ ಅವಧಿಗೆ ನೀಡಲಾಗಿದೆ ಎಂದು ಬಿ.ಬಿ.ಎಂ.ಪಿ., ಆಯುಕ್ತರು ವರದಿ ಮಾಡಿರುತ್ತಾರೆ.
ಆ	ನೀಡಿದ್ದಲ್ಲಿ, ಎಷ್ಟು ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ (ಆದೇಶಗಳೊಂದಿಗೆ ಪೂರ್ಣ ಮಾಹಿತಿ ನೀಡುವುದು);	
ಇ	ಈ ಕಾಲೇಜಿಗೆ ಎಷ್ಟು ಜಾಗ ನೀಡಲಾಗಿದೆ ಹಾಗೂ ಬಾಡಿಗೆ ಎಷ್ಟು ನಿಗಧಿಪಡಿಸಲಾಗಿದೆ (ಆದೇಶಗಳೊಂದಿಗೆ ಪೂರ್ಣ ಮಾಹಿತಿ ನೀಡುವುದು);	ಮೊದಲನೇ ಹಂತದಲ್ಲಿ ಎರಡು ಕೊಠಡಿಗಳನ್ನು ನೀಡಿದ್ದು, ನಂತರ ವಿಸ್ತರಿಸಲಾಗಿದ್ದು, ಈಗ ಒಟ್ಟು 7 ಕೊಠಡಿಗಳನ್ನು ನೀಡಲಾಗಿದೆ. ಪ್ರತಿ ಕೊಠಡಿಗೆ ರೂ.500/- ದರದಲ್ಲಿ ಬಾಡಿಗೆ ನಿಗಧಿಪಡಿಸಲಾಗಿದೆ.
ಈ	ಈ ಕಾಲೇಜನ್ನು ಯಾವ ಟ್ರಸ್ಟ್‌ನಿಂದ ನಡೆಸಲಾಗುತ್ತಿದೆ (ಟ್ರಸ್ಟ್ ಡೀಡ್‌ನೊಂದಿಗೆ ಪೂರ್ಣ ಮಾಹಿತಿ ನೀಡುವುದು)?	ಕರ್ನಾಟಕ ಎಜುಕೇಶನ್ ಸೊಸೈಟಿ ಸಂಸ್ಥೆಯಿಂದ ನಡೆಸಲಾಗುತ್ತಿದ್ದು, ಸಂಸ್ಥೆಯ Memorandum of Association ಪ್ರತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. ಸದರಿ ಕಾಲೇಜು ಟ್ರಸ್ಟ್‌ನಿಂದ ನಡೆಸಲಾಗುತ್ತಿಲ್ಲ. ಬದಲಿಗೆ ಸೊಸೈಟಿಯಿಂದ ನಿರ್ವಹಿಸಲಾಗುತ್ತಿದೆ.

ಸಂಖ್ಯೆ: ನಅಇ 587 ಎಂಎನ್‌ಜಿ 2018

(ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಅನುಬಂಧ - 1

Name of the Society: Karnataka Education Society.

Description of Document: Memorandum.

Date of Registration: S No. 167/8)-88

1

Registered.

Date 19/6/8)

Registrar

(i)

-4-

ಪ್ರಪತ್ರ ಕ್ರಮಾಂಕ (೫)

S. No. 167/87-88

Bangalore District.

ನೋಂದಣಿ ಪ್ರಮಾಣ ಪತ್ರ

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ (೧೯೬೦ ನೆಯ ಇಸವಿ ೧೭ನೆಯ ಕ್ರಮಾಂಕದ ಕರ್ನಾಟಕ ಅಧಿನಿಯಮದ)

ಮೇರೆಗೆ "Karnataka Education Society", 92, II Main, III Block, Basaveswara nagar, Bangalore - 79

ಎಂಬ ಸಂಘವು ಇಂದು ನೋಂದಾಯಿತವಾಯಿತೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂದಾಯವಾದ ಶುಲ್ಕ ರೂಪಾಯಿಗಳು Fifty only.

Bangalore. ನಲ್ಲಿ ಒಂದು ಸಾವಿರದ ಒಂಬೈನೂರ Eighty Seven. ಇಸವಿ June.

ತಿಂಗಳು 19th ದಿವಾಂಕದಂದು ನಾನು ಸಹಿ ಹಾಕಿಕೊಟ್ಟಿದ್ದೇನೆ.

The Registrar of Societies Bangalore City Corporation
ಬೆಂಗಳೂರು ನಗರ ಸಂಘಗಳ ರಿಜಿಸ್ಟ್ರಾರ್

(S. S. Vidwan) 19/6/87

ಸಂಘಗಳ ರಿಜಿಸ್ಟ್ರಾರು, ಕರ್ನಾಟಕ ಸರ್ಕಾರ.

Bangalore District.

(2)

Dated 16.6.1987

MEMORANDUM OF ASSOCIATION

1. Name of the Society — KARNATAKA EDUCATION SOCIETY

2. Address of the Society — 92, II Main, III Block, Basaveswaranagar, Bangalore 560 079

3. AIMS AND OBJECTS OF THE SOCIETY

a) To open Nursery, primary, middle and high schools and colleges.

b) To conduct teachers Training classes.

c) To open technical and commercial education

d) To open reading room and library with all moden books

e) To conduct adult education classes

f) To conduct tailoring and embrddery classes for women

~~g) To get the moveables and immoveble properties for the use of the society~~

~~h) To get the loan from the Government and other seurces.~~

4 The Income/profit of the society shall not be divided among the members and the same shall be used for the benefit of the society only.

5 The Secretary of the society is authorised to correspond with the Registrar of societies in Karnataka, Bangalore for registration and other purposes.

6. The office bearers of the Society are as follows:-

Sl. No.	Name, address & Occupation	Age	Designation	Signature.
1.	Mahadeva Prakash M. 13, 4th Main Ram Mohanpura Srirampura Bangalore-21. (Journalist)	34	President	[signature]
2.	M.T.Mad swame gowda 92, II Main III Block III stage Basaveswaranagar Bangalore-79 (Advocate)	34	General Secretary	[signature]

/5/

2	3	4	5
4. S.V.Muddappa Landlord Shingehally Vemegal post Kolar Taluk & Dist.	38	member	[signature]
5. Amruthavani 13, 4th main Ram Mohanpura Sriramapura Bangalore-21. (Service)	47	member	[signature]
6. S.P.Ramu 168, 10th main [illegible] C Layout Vijayanagar East Bangalore-40 (Service)	45	Member	[signature]
7. [illegible]amegowda [illegible] I Main road [illegible]adarajanagar Bangalore.40 (Advocate)	33	member	B. Ramegowda

Witnesses

1. D.M. Shankaregowda 32 [illegible] Main Road [illegible] B-40 — D.M. Shankaregowda

M. Shylesh
Press & Commercial Photographer
No. 8, 4th 'N' Block, Rajajinagar
BANGALORE-560 010

Shylesh.m

RULES AND REGULATIONS

Name of the Association KARNATAKA EDUCATION SOCIETY

Address of the Association 92, II Main III Block
Basaveswaranagar
Bangalore-560079

MEMBERSHIP

Donation of Rs.100/- will be collected from life members.

Admission fee for each member shall be Rs.2/-

Each member shall pay Rs.1/- for subscription orsuch amount as may from time to time to be fixed towards the monthly subscription of the Association and all the monthly subscription shall fall due on the first day of every month.

Any person who has attained t e age of above 18 years will be allowed to become a member of the Association

If the subscription of a member is in arrears for three months following without satisfaction explanation to the Secretary, his/her name will be removed and the executive committee may consider his/her application for re-admission subject to all the arrears including the admission fee paid.

Information required by members:
Any member of the Association may apply to the Secretary for information as he may be required on any matter of objects/rules and regulations of the Association

GENERAL AND OTHER MEETINGS

A general body meeting of the Association will be held annually during the month of March.

The report of the management on the previous year's working and the audited account for the same period and preceedin year shall be discussed and submitted for confirmation.

A new committee for the coming year shall be elected in the General body meeting.

The committee shall generally meet once in six months for which clear notice of seven days shall be given to the members by the Secretary.

5

The President may call for the General body meeting if he so desires and it shall be on the requisition of 25% of the members for a which seven days notice shall be given to the members.

Voting shall be conducted by show of hands.

Seven days clear notice to the ordinary meetings and 21 days clear notice to the special General body meetings will be given and subject matter to be discussed shall be stated in such notice.

A special general body meeting shall be convened if necessary as per Section 11(3) of the Karnataka Societies Registration Act, 1960.

Quorum :
The quorum of the General body meeting shall be one third of the members.

Auditor:
An auditor shall be appointed annually and the remuneration shall be fixed by the members of the Annual general meeting.

[illegible]NTS:

The official year of the Association shall be from first January to the end of December every year.

The assets and liabilities and the balance sheet of the Association shall be drawn up by the auditor duly audited and shall be laid before the Annual general meeting for information.

Such balance sheet and the list of committee members shall be filed with the Registrar of societies as per Section 13 of the Karnataka Societies Registration Act 1960.

[illegible]TIVE POWERS OF THE COMMITTEE

The administration and management of the Association shall vest in the executive committee consisting of [illegible] members including president, Secretary, Treasurer [illegible] at the annual general meeting of the Association [illegible] control of the Association in the general body meeting.

President:

The President shall act as the chairman in the committee and in his absence the members shall elect any one of the members as chairman.

Secretary:

The Secretary shall have charge of all sports materials belonging to the Association with the exception of those pertaining to accounts and he shall be the executive officer of the Association. He shall sign all routine letters, pass all bills, cheques made out by the Secretary if the Secretary is absent the president shall also sign the cheques.

Treasurer:

The treasurer shall have the power to and keep in custody all moneys and securities belonging to the Association, receive all dues and issue receipts maintain the subscription book and true accounts of all moneysreceived and spent on behalf of association.

Any vacancy that may arise in the executive committee may be filled in by the remaining members.

Any member of the executive committee being absent for 3 successive meetings withour proper cause shall cease to be a member of the committee and shall be eligible to be re-elected.

The Executive Committee in its meetings shall consider all questions affecting the business that may be of interest to the members of the Association and they shall form and circulate any information which may be of use and beneficial to the meeting.

The executive committee shall meet every month or earlier if there is any business to consider the Secretary shall convene such meetings in consultation with the President, three members shall form a quorum

Alterations or amendments to the Memorandum of Association shall be made as per Sec.9 of the Karnataka Societies Registration Act 1960

30. Change of name, rules and regulations shall be made as per section 10 of the Karnataka Societies Registration Act 1960.

31. Working hours of the Associaton shall be from 8.00 a.m. to 9.00 p.m.

32. Regarding amalgamating of the association arises Section 21 of the Karnataka Societies Registration Act 1960 shall be followed.

33. Dissolution of the Association, if arises, Section 22 and 23 of the Societies Registration Act, 1960 shall be followed.

34. For all things, and matters which have not been specifically provided for herein above the provisions of the Societies Registration Act 1960 and rules made thereunder shall be followed.

35. Any change in the constitution of the society can be made by passing t e special resolution by the Executive committee and after taking/ passing the same in the special general body meeting 2/3rd majority of members,

SIGNATORIES TO THE ABOVE RULES AND REGULATIONS

Sl. No.	Name address & occupation	Age	Designation	Signature
1.	Mahadeva Prakash M 13, 4th main Ramamohanpura Srirampura Bangalore-21 (Journalist)	32	President	
2.	M.T.Mariswame gowda 92 II Main III Block III stage Basaveswaranagar Bangalore-79 (Advocate)	34	General Secretary	
3.	V.Raghu 4, 2nd floor 4th E Block Rajajinagar Bangalore-10 (Industrialist)	30	Treasurer	

CR 78478/11

18/10/11

Order for publ...

ORDER SHEET

IN THE COURT OF PRL. CITY CIVIL & SESSIONS JUDGE
At: Bangalore (Dist: BANGALORE)

M.A. 47 / 2011

Appellant/s		Respondent/s
KARNATKA EDUCATION SOCIETY	V/S	BBMP, COMMISSIONER And Others.

Dated 14/10/2011

Nature of Case: APPEAL UNDER CORPORATION ACT, PPE ACT, VILLAGE

Provision of Law: U/s 10 of Karnataka public premises eviction of unauthorised occupants Act

Advocate for the Appellant/s Sri/Smt MANJUNATHA.S.V

Date of Filing: 12/10/2011 1:06 PM

Relief Claimed: TO CALL FOR THE RECORES AND SET ASIDE THE BEARING NO. J C W KPPA/PR-69/2011-12 UN DATED BY THE SECOND RESPONDENT PASSED BY JOINT COMMISSIONER U/SEC 5(1) AND THE PRAYER AS PER PLAINT.

Date of Cause of Action:

Receipt No.: 30539 / 2011 Date: 12/10/2011

Purpose	Mode	Bank Name	Amount
Process Fee	CASH		16

IA 1 U/sec.10(3) of Karnataka Public Premises Act
PRAYS TO STAY THE ORDER BEARING NO.JC.C.(W) KPPA/PR-69/2011-12, UN-DATED PASSED BY THE RESPONDENT PASSED BY JOINT COMMISSIONER, U/SEC.5(1) OF THE KARNATAKA PUBLIC PREMISES (EVICTION OF UNAUTHORIZED OCCUPATION) ACT 1974 IN RESPECT OF THE SUBJECT PROPERTY, IN THE INTEREST OF JUSTICE & EQUITY.

No caveat

This case is made over to the learned Addl. Judge, sitting in the Court Hall No. 42 For the Disposal according to Law.

COURT OF THE CITY CIVIL AND SESSIONS JUDGE, BANGALORE
Date

14/10/11

PRL. CITY CIVIL & SESSIONS JUDGE
Bangalore

14/10/11

Proceedings

Issue Notice of Petition to the Respondent/s through Court & returnable by:

Heard Sri S.V.M. for appellant on I.A.
Call on for order by 15-10-11

(9)

MA 47/11

15-10-11

P – MSV

for orders

P.O. IS ON LEAVE CASE ADJ. N. TO 17-10-11

I/C. ACCJ

17-10-11

Heard Counsel for appellant on S.A. Argued that appellant is a Society & running Educational Institution since many years. appellant paying rent to the respondent. Respondent without considering the legal & without following due process of law under the K.P.P. Act passed impugned orders and [illegible] authority to the [illegible]. Hence prays to [illegible] orders passed by [illegible].

Perused S.A. S.A. & appeal & other papers. Appeal [illegible]

(10)

CCH - 42

Hence I pass following order

ORDER

Pending disposal of I.A. I

Respondents shall maintain status quo

till next date.

Issue notice on I.A. I &

Issue notice on main appeal.

S/by 30-11-11

[illegible] 15/10/11

(signature)

17/10/11

(11)

Karnataka Education Society
Rules & Regulations

S.No. 167/81-82

Registered
19/6/81

Registrar

TEN RUPEES

Prepared by
Compared by

(12)

[illegible]

[illegible]

[illegible]

[illegible]

[illegible]

[illegible]

[illegible]

[illegible]

18/8/93

[illegible]

1) [illegible]
2) [illegible]
3) [illegible]
4) [illegible]
5) [illegible]

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	47
2	ಸದಸ್ಯರ ಹೆಸರು	:	ಶ್ರೀ ಎಸ್.ಸುರೇಶ್‌ಕುಮಾರ್
3	ಉತ್ತರಿಸುವ ದಿನಾಂಕ	:	12-12-2018
4	ಉತ್ತರಿಸುವವರು	:	ಮಾನ್ಯ ಉಪಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಸಂಗ್ರಹವಾಗುವ ಘನತ್ಯಾಜ್ಯ ಎಷ್ಟು; ಈ ಘನ ತ್ಯಾಜ್ಯವನ್ನು ವಿಲೇವಾರಿ ಮಾಡಲು ಯಾರಿಗೆ ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 741 ಚ.ಕಿ.ಮೀ ವ್ಯಾಪ್ತಿ ಒಳಗೊಂಡಿದ್ದು ಒಟ್ಟು 198 ವಾರ್ಡ್‌ಗಳಿರುತ್ತವೆ. ಸದರಿ ಎಲ್ಲಾ 198 ವಾರ್ಡ್‌ಗಳಿಂದ ಸುಮಾರು 130 ಲಕ್ಷ ಜನಸಂಖ್ಯೆ ಹೊಂದಿದ್ದು, ಸರಾಸರಿ ಪ್ರತಿ ದಿನ ಪ್ರತಿ ವ್ಯಕ್ತಿಗೆ ತ್ಯಾಜ್ಯ ಉತ್ಪಾದನೆ 0.4 ರಿಂದ 0.6 ಕೆಜಿ ಎಂದು ಪರಿಗಣಿಸಿದಾಗ ಪ್ರತಿದಿನ ಸುಮಾರು 4000 ರಿಂದ 4200 ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಪಾಲಿಕೆಯ 198 ವಾರ್ಡ್‌ಗಳಲ್ಲಿ 151 ವಾರ್ಡ್‌ಗಳಿಗೆ ಟೆಂಡರ್ ಪ್ರಕಟಣೆ ಸಂಖ್ಯೆ: ಜಂ.ಆ/ಆ&ಘ.ತ್ಯಾ.ನಿ/ಪಿಎಸ್/ಪಿ-1517/2016-17, ದಿನಾಂಕ: 04-04-2016 ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಗೆ ಒಟ್ಟು 12 ವಾರ್ಡ್‌ಗಳಿಗೆ 13 ಬಿಡ್‌ಗಳು ಮಾತ್ರ ಸಲ್ಲಿಕೆಯಾಗಿದ್ದು, ಇದರಲ್ಲಿ 9 ವಾರ್ಡ್‌ಗಳ 10 ಬಿಡ್‌ಗಳು ತಾಂತ್ರಿಕವಾಗಿ ಅರ್ಹವಾಗಿದ್ದು, ದಿನಾಂಕ: 06-12-2016ರ ಟೆಂಡರ್ ಅಂಗೀಕರಿಸುವ ಸಮಿತಿಯ ತೀರ್ಮಾನದನ್ವಯ ಸಲ್ಲಿಕೆಯಾದ ಬಿಡ್‌ಗಳನ್ನು ರದ್ದುಗೊಳಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016, ದಿನಾಂಕ: 07-08-2017ರನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಎಲ್ಲಾ ಮಹಾನಗರ ಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಲ್ಲಾ ಮೂಲಗಳಿಂದ ಒಟ್ಟಾರೆ ಪೌರ ಕಾರ್ಮಿಕರ ಸಂಖ್ಯೆಯನ್ನು ಪ್ರತಿ 700 ಜನಸಂಖ್ಯೆಗೆ ಒಬ್ಬರಂತೆ ಸೀಮಿತಗೊಳಿಸಬೇಕಾಗಿ ಹಾಗೂ ಸದರಿ ಸ್ವಚ್ಛತಾ ಕಾರ್ಯಕ್ಕಾಗಿ ಪೌರ ಕಾರ್ಮಿಕರನ್ನು (ಖಾಯಂ ಪೌರಕಾರ್ಮಿಕರನ್ನು ಸೇರಿ) ನೇರವಾಗಿ ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿ ಹಾಗೂ ಸದರಿ ಕಾರ್ಮಿಕರಿಗೆ ಸ್ಥಳೀಯ ಸಂಸ್ಥೆಗಳಿಂದ ಸಂಭಾವನೆಯನ್ನು ನೇರವಾಗಿ ನೀಡಬೇಕಾಗಿ ಸೂಚಿಸಲಾಗಿರುತ್ತದೆ. ಅದರನ್ವಯ ಪಾಲಿಕೆಯು ದಿನಾಂಕ: 01-01-2018 ರಿಂದ ಸ್ವಚ್ಛತೆಯಲ್ಲಿ ತೊಡಗಿರುವ ಎಲ್ಲಾ ಪೌರ ಕಾರ್ಮಿಕರಿಗೆ ನೇರವಾಗಿ ವೇತನವನ್ನು ಪಾವತಿಸಲಾಗುತ್ತಿದೆ. ಉಳಿದಂತೆ ಮನೆಮನೆಯಿಂದ ಹಾಗೂ ವಾಣಿಜ್ಯ ಉದ್ದಿಮೆಗಳಿಂದ (ಬಲ್ಕ್ ಜನರೇಟರ್ ಹೊರತುಪಡಿಸಿ) ತ್ಯಾಜ್ಯ ಸಂಗ್ರಹಣೆಯನ್ನು ಇಲಾಖಾವತಿಯಿಂದ ಸರಬರಾಜುದಾರರ ಮೂಲಕ ವಾಹನಗಳನ್ನು ಪಡೆದು ನಿರ್ವಹಣೆ ಮಾಡಲಾಗುತ್ತಿದೆ.
ಆ	ಪ್ರತಿ ನಿತ್ಯ ಸಂಗ್ರಹ ಮಾಡುವ ಘನ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕೈಗೊಂಡಿರುವ ಕ್ರಮಗಳೇನು; ಎಷ್ಟು ಸ್ಥಳಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ; (ವಿವರ ನೀಡುವುದು)	ವಿವರವನ್ನು **ಅನುಬಂಧ** ದಲ್ಲಿ ನೀಡಿದೆ.

. . . 2 .

ಇ	ಘನ ತ್ಯಾಜ್ಯ ವಿಲೇವಾರಿ ಮಾಡುವ ಸಂಬಂಧ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ನೀಡಿರುವ ಸೂಚನೆ ಏನು; ನ್ಯಾಯಾಲಯ ನೀಡಿರುವ ಸೂಚನೆಯನ್ನು ಪಾಲಿಸಲಾಗಿದೆಯೇ;	ಘನತ್ಯಾಜ್ಯ ವಿಲೇವಾರಿ ಮಾಡುವ ಸಂಬಂಧ ಬಾಗಲೂರು ಕ್ವಾರಿ ಘಟಕಕ್ಕೆ ಸಂಬಂಧಿಸಿದಂತೆ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು O.A No: 179/2017 ರಲ್ಲಿ ಸದರಿ ಕ್ವಾರಿ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಲು ಮತ್ತು ಬಯೋಮೈನಿಂಗ್ ಮಾಡಲು ಸೂಚಿಸಿರುತ್ತದೆ. ಅದರಂತೆ, ಬಯೋಮೈನಿಂಗ್ ಮಾಡುವ ಬಗ್ಗೆ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಮತ್ತು ನುರಿತ ತಜ್ಞರಿಂದ ಅಭಿಪ್ರಾಯ ಪಡೆಯಲಾಗಿ, ಸದರಿ ಪ್ರದೇಶದಲ್ಲಿ ಘನತ್ಯಾಜ್ಯವು ಕೇವಲ ಒಂದು ವರ್ಷ ಹಳೆಯದಾಗಿದ್ದು, ಬಯೋಮೈನಿಂಗ್ Feasibility ಇರುವುದಿಲ್ಲ. ಅದರ ಬದಲಾಗಿ Bio-remediation ಮಾಡುವುದಕ್ಕೆ ಸಲಹೆ ನೀಡಿರುತ್ತಾರೆ. ಅದರಂತೆ ಮಾನ್ಯ ಹಸಿರು ನ್ಯಾಯಾಧೀಕರಣ ಪೀಠಕ್ಕೆ ವರದಿ ಮಂಡಿಸಲಾಗಿರುತ್ತದೆ.
ಈ	ನ್ಯಾಯಾಲಯದ ಸೂಚನೆಯನ್ನು ಪಾಲಿಸದೆ ಇರುವ ಕಾರಣ ಬಿ.ಬಿ.ಎಂ.ಪಿ.ಗೆ ದಂಡ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ನ್ಯಾಯಾಲಯದ ಸೂಚನೆಯನ್ನು ಪಾಲಿಸದಿರಲು ಕಾರಣಗಳೇನು ಹಾಗೂ ನ್ಯಾಯಾಲಯದ ಆದೇಶವನ್ನು ಪಾಲಿಸದಿರುವ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಬಂದಿದೆ. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ಘನತ್ಯಾಜ್ಯ ನಿರ್ವಹಣೆ ನಿಯಮ-2016ರಂತೆ ಘನತ್ಯಾಜ್ಯ ವಿಲೇವಾರಿ ನಿರ್ವಹಿಸಲು ಹಾಗೂ ಬಾಗಲೂರು ಭೂಭರ್ತಿ ಘಟಕದಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಿ ಈಗಾಗಲೇ ಬಾಗಲೂರು ಭೂಭರ್ತಿ ಘಟಕದಲ್ಲಿ ವಿಲೇವಾರಿ ಮಾಡಲಾದ ಘನತ್ಯಾಜ್ಯವನ್ನು ಬಯೋಮೈನಿಂಗ್ ಮಾಡಲು ಆದೇಶಿಸಿರುತ್ತದೆ. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶದಂತೆ ಬಯೋಮೈನಿಂಗ್‌ನ್ನು ಪ್ರಾರಂಭಿಸಲಾಗಿರುತ್ತದೆ. ಈ ಸಂಧರ್ಭದಲ್ಲಿ ದುರ್ವಾಸನೆ ಹಾಗೂ ಸೊಳ್ಳೆಗಳ ಉತ್ಪತ್ತಿ ಹೆಚ್ಚುತ್ತಿರುವುದರಿಂದ ಸ್ಥಳೀಯ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ವಿರೋಧ ವ್ಯಕ್ತಪಡಿಸಿರುತ್ತಾರೆ. ಈ ಮೇರೆಗೆ ಬಯೋಮೈನಿಂಗ್ ಕ್ರಮವನ್ನು ಸ್ಥಗಿತಗೊಳಿಸಲಾಗಿರುತ್ತದೆ. ಮುಂದುವರೆದು ಪಾಲಿಕೆಯು ಬಯೋಮೈನಿಂಗ್ ಕ್ರಮ ಕೈಗೊಳ್ಳುವ ಬಗ್ಗೆ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ತಜ್ಞರ ಅಭಿಪ್ರಾಯ ಪಡೆದಿದ್ದು, ಬಯೋಮೈನಿಂಗ್ ಕ್ರಮ 5 ರಿಂದ 15 ವರ್ಷಗಳ ಹಳೆ ಘನತ್ಯಾಜ್ಯಕ್ಕೆ ಮಾತ್ರ ಸೂಕ್ತವಾಗಿದ್ದು, ಬಾಗಲೂರು ಭೂಭರ್ತಿ ಘಟಕದಲ್ಲಿ ತುಂಬಲಾದ ಘನತ್ಯಾಜ್ಯವು ಇತ್ತೀಚೆಗೆ ತುಂಬಿದ್ದು, ಸದರಿ ಘನತ್ಯಾಜ್ಯಕ್ಕೆ ಬಯೋರೆಮಿಡಿಯೇಷನ್ ಮಾಡುವುದು ಸೂಕ್ತವಾಗಿರುತ್ತೆಂದು ವರದಿ ನೀಡಿರುತ್ತಾರೆ. ಸದರಿ ವಿಷಯವನ್ನು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಗಮನಕ್ಕೆ ತರಲಾಗಿರುತ್ತದೆ. ನ್ಯಾಯಾಲಯದ ಆದೇಶದಂತೆ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದು, ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ಬಯೋಮೈನಿಂಗ್ ಕ್ರಮವನ್ನು ಸ್ಥಗಿತಗೊಳಿಸಲಾಗುತ್ತದೆ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ದಂಡ ವಿಧಿಸಿರುವ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಪಾಲಿಕೆಯಿಂದ ಮೇಲ್ಮನವಿ ಸಲ್ಲಿಸಲಾಗಿದೆ.

ಸಂಖ್ಯೆ: ನಅಇ 592 ಎಂಎನ್‌ವೈ 2018

(ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಅನುಬಂಧ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ 6 ಹೊಸ ಸಂಸ್ಕರಣಾ ಘಟಕಗಳನ್ನು ನಿರ್ಮಿಸಿ, ಕಾರ್ಯನಿರ್ವಹಣೆಯನ್ನು ನಿರ್ವಹಿಸಲು ವಲಯಗಳಿಗೆ ಹಸ್ತಾಂತರಿಸಲಾಗಿರುತ್ತದೆ. ಅಲ್ಲದೆ ಘಟಕಗಳು ದೈನಂದಿನ ಕೆಲಸ ನಿರ್ವಹಣೆಗೆ ಯಾವುದೇ ತೊಂದರೆಯಾಗದಂತೆ ತುರ್ತು ಅವಶ್ಯಕ ಕೆಲಸಗಳನ್ನು ನಿರ್ವಹಿಸುವ ಹಿತದೃಷ್ಟಿಯಿಂದ ಪ್ರತಿ ಘಟಕಕ್ಕೆ ಎಸ್ಕ್ರೋ ಖಾತೆ ತೆರೆದು ನಿರ್ವಹಿಸಲು ಆದೇಶಿಸಲಾಗಿರುತ್ತದೆ. ಪಾಲಿಕೆಯ ವತಿಯಿಂದ ನಿರ್ಮಿಸಿದ 6 ಹೊಸ ಸಂಸ್ಕರಣಾ ಘಟಕ, ಎರಡು ಹಳೆಯ ಘಟಕ ಹಾಗೂ ಒಂದು ಖಾಸಗಿ ಘಟಕದ ಸಾಮರ್ಥ್ಯವು ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ಘಟಕದ ಹೆಸರು	ನಿರ್ವಹಣೆಗಾಗಿ ನಿಯೋಜಿಸಿರುವ ವಲಯ	ಘಟಕದ ಹಸಿತ್ಯಾಜ್ಯ ಸಂಸ್ಕರಣಾ ಸಾಮರ್ಥ್ಯ (ಟನ್‌ಗಳಲ್ಲಿ)	ಹಾಲಿ ಸಂಸ್ಕರಣೆ ಯಾಗುತ್ತಿರುವ ಸಾಮರ್ಥ್ಯ
1.	ಕನ್ನಹಳ್ಳಿ	ಪಶ್ಚಿಮ	350	00
2.	ಚಿಕ್ಕನಾಗಮಂಗಲ	ದಕ್ಷಿಣ	300	165
3.	ದೊಡ್ಡಬಿದರಕಲ್ಲು	ದಾಸರಹಳ್ಳಿ	150	53
4.	ಸಿಗೇಹಳ್ಳಿ	ರಾಜರಾಜೇಶ್ವರಿ ನಗರ	120	42
5.	ಸುಬ್ಬರಾಯನಪಾಳ್ಯ	ಮಹದೇವಪುರ	150	30
6.	ಲಿಂಗದೀರನಹಳ್ಳಿ	ಪೂರ್ವ	150	42
7.	ಮಾವಳ್ಳಿಪುರ	ಯಲಹಂಕ	300	0
8.	ಕೆ.ಸಿ.ಡಿ.ಸಿ	ಬೊಮ್ಮನಹಳ್ಳಿ	350	88
ಪಾಲಿಕೆಯ ಸಂಸ್ಕರಣಾ ಘಟಕಗಳ ಒಟ್ಟು ಹಸಿತ್ಯಾಜ್ಯ ಸಂಸ್ಕರಣಾ ಸಾಮರ್ಥ್ಯ			**1870**	**420**
9	ಎಂ.ಎಸ್.ಜಿ.ಪಿ	ಪೂರ್ವ	500	410

ಮೇಲ್ಕಂಡ ಘಟಕಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಮಾಣದಲ್ಲಿ ತ್ಯಾಜ್ಯ ಸಂಸ್ಕರಣೆಯಾಗುತ್ತಿಲ್ಲದ ಕಾರಣ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ:145:ಎಸ್‌ಎಫ್‌ಸಿ:2016, ಬೆಂಗಳೂರು, ದಿ:01.04.2016 ಮತ್ತು ಆದೇಶ ಸಂಖ್ಯೆ: ನಅಇ:316:ಎಂಎನ್‌ವೈ:2017, ಬೆಂಗಳೂರು, ದಿನಾಂಕ:24.10.2017ರಂತೆ ಪಾಲಿಕೆಯ ವ್ಯಾಪ್ತಿಯಲ್ಲಿ ದೈನಂದಿನ ಸ್ವಚ್ಛತೆಯ ಹಿತದೃಷ್ಟಿಯಿಂದ ಮಿಟ್ಟಗಾನಹಳ್ಳಿ, ಬಾಗಲೂರು ಮತ್ತು ಬೆಳ್ಳಹಳ್ಳಿ ಸರ್ಕಾರಿ ಕ್ವಾರಿ ಗುಂಡಿಗಳಲ್ಲಿ ವೈಜ್ಞಾನಿಕವಾಗಿ ಘನತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ. ಪ್ರಸ್ತುತ ಬೆಳ್ಳಹಳ್ಳಿ ಕ್ವಾರಿಯಲ್ಲಿ ಘನತ್ಯಾಜ್ಯವನ್ನು ವಿಲೇವಾರಿ ಮಾಡಲಾಗುತ್ತಿದೆ. ಇನ್ನುಳಿದ ಎರಡು ಘಟಕಗಳಲ್ಲಿ ತ್ಯಾಜ್ಯ ಭೂಭರ್ತಿಯನ್ನು ಸ್ಥಗಿತಗೊಳಿಸಲಾಗಿದೆ.

ಅಪರ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	890
ಸದಸ್ಯರ ಹೆಸರು	:	ಶ್ರೀ ತನ್ವೀರ್ ಸೇಠ್ (ನರಸಿಂಹರಾಜ)
ಉತ್ತರಿಸ ಬೇಕಾದ ದಿನಾಂಕ	:	12.12.2018
ಉತ್ತರಿಸಬೇಕಾದ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 'ಜಿ' ಕೆಟಗರಿಯಲ್ಲಿ ವಿಧಾನ ಸಭೆಯ ಸದಸ್ಯರುಗಳಿಗೆ ಮಂಜೂರು ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು?	ಕಳೆದ ಮೂರು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 'ಜಿ' ಕೆಟಗರಿಯಲ್ಲಿ ವಿಧಾನ ಸಭೆಯ ಸದಸ್ಯರುಗಳಿಗೆ ಯಾವುದೇ ನಿವೇಶನಗಳನ್ನು ಮಂಜೂರು ಮಾಡಿರುವುದಿಲ್ಲ.
ಆ)	ಮಂಜೂರು ಮಾಡಿರುವ ನಿವೇಶನಗಳಲ್ಲಿ ವ್ಯಾಜ್ಯ ಹಾಗೂ ನ್ಯಾಯಾಲಯ ಪ್ರಕರಣಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಉದ್ಭವಿಸುವುದಿಲ್ಲ
ಇ)	ಬಂದಿದ್ದಲ್ಲಿ ವ್ಯಾಜ್ಯ ಇರುವ ನಿವೇಶನಗಳ ಮಂಜೂರಾತಿಯನ್ನು ರದ್ದುಪಡಿಸಿ ಬದಲಿ ನಿವೇಶನಗಳನ್ನು ಮಂಜೂರು ಮಾಡಿ ನೊಂದಣಿ ಮಾಡಲಾಗಿದೆಯೇ:	ಉದ್ಭವಿಸುವುದಿಲ್ಲ
ಈ)	ಬದಲಿ ನಿವೇಶನ ಗುರುತಿಸಿ ಸಂಬಂದಿಸಿದ ಶಾಸಕರ ಹೆಸರಿಗೆ ನೊಂದಣಿಗೆ ಬಾಕಿ ಇರುವ ಪ್ರಕರಣಗಳು ಎಷ್ಟು: (ಮಾಹಿತಿ ಒದಗಿಸುವುದು)	ಉದ್ಭವಿಸುವುದಿಲ್ಲ
ಉ)	ಬದಲಿ ನಿವೇಶನಗಳನ್ನು ಶಾಸಕರಿಗೆ ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?	ಉದ್ಭವಿಸುವುದಿಲ್ಲ

ಸಂ: ನಅಇ 651 ಬೆಂಭೂಸ್ವಾ 2018.

(ಡಾ॥ ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 43

ಸದಸ್ಯರ ಹೆಸರು : **ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ)**

ಉತ್ತರಿಸಬೇಕಾದ ದಿನಾಂಕ : 12.12.2018

ಉತ್ತರಿಸಬೇಕಾದ ಸಚಿವರು : **ಮಾನ್ಯ ಉಪ ಮುಖ್ಯಮಂತ್ರಿಗಳು**

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಿರುವ ಕೆಂಪೇಗೌಡ ಬಡಾವಣೆಯಲ್ಲಿ ಹಂಚಿಕೆಗೆ ಲಭ್ಯವಿರುವ ನಿವೇಶನಗಳು ಎಷ್ಟು; ಈ ವರೆಗೆ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; ಬಾಕಿ ಉಳಿದಿರುವ ನಿವೇಶನಗಳೆಷ್ಟು (ಸಂಪೂರ್ಣ ವಿವರ ನೀಡುವುದು)	• ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಪ್ರಸ್ತುತ ಇಲ್ಲಿಯವರೆವಿಗೆ ವಿವಿಧ ಅಳತೆಯ ಒಟ್ಟು = 21124 ನಿವೇಶನ (18312 **ಮಧ್ಯಂತರ** + 2772 **ಮೂಲೆ ನಿವೇಶನ**) ಗಳನ್ನು ರಚಿಸಲಾಗಿದೆ. • ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೊದಲನೇ ಹಂತದಲ್ಲಿ ವಿವಿಧ ಅಳತೆಯ 5000 ಮಧ್ಯಂತರ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ. ಹಾಗೂ ಭೂಮಾಲೀಕರಿಗೆ 40:60 ಅನುಪಾತದಡಿಯಲ್ಲಿ ಭೂಪರಿಹಾರವಾಗಿ ವಿವಿಧ ಅಳತೆಯ ಸುಮಾರು 2157 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. • 2ನೇ ಹಂತದಲ್ಲಿ ವಿವಿಧ ಅಳತೆಯ 4971 ಮಧ್ಯಂತರ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ. ಹಾಗೂ ಭೂಮಾಲೀಕರಿಗೆ 40:60 ಅನುಪಾತದಡಿಯಲ್ಲಿ ಭೂಪರಿಹಾರವಾಗಿ ವಿವಿಧ ಅಳತೆಯ ಸುಮಾರು 3800 ನಿವೇಶನಗಳನ್ನು ಹಂಚಿಕೆಗೆ ನೀಡಲಾಗಿದೆ. • ಅರ್ಕಾವತಿ ಬಡಾವಣೆಯ ನಿವೇಶನದಾರರಿಗೆ ಬದಲಿಯಾಗಿ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಇಲ್ಲಿಯವರೆಗೆ ಸುಮಾರು 896 ವಿವಿಧ ಅಳತೆಯ ಮಧ್ಯಂತರ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. • ಹಸಿರು ಪೀಠದ ನ್ಯಾಯಾಲಯದ ಆದೇಶದಂತೆ 864 ನಿವೇಶನಗಳು ಬಫರ್ ಜೋನ್ ವಲಯದಲ್ಲಿ ಬರುತ್ತವೆ. • ಬೆಸ ಅಳತೆಯ ಸುಮಾರು 624 ನಿವೇಶನಗಳನ್ನು ರಚಿಸಲಾಗಿದ್ದು, ಈ ನಿವೇಶನಗಳನ್ನು ಭೂಮಾಲೀಕರಿಗೆ ಭೂಪರಿಹಾರವಾಗಿ ನೀಡಬೇಕಾಗಿರುತ್ತದೆ.
ಆ)	ಈ ಬಡಾವಣೆಯಲ್ಲಿ ಹಂಚಿಕೆ ಆಗಿರುವ ನಿವೇಶನದ ಅಕ್ಕಪಕ್ಕದಲ್ಲಿ ಹೈ ಟೆನ್ಷನ್ ವಿದ್ಯುತ್ ಲೈನ್ ಹಾದು ಹೋಗಿರುವುದು ಮತ್ತು ಸ್ವಾಧೀನವಾಗದ ಜಮೀನಿನಲ್ಲಿ ನಿವೇಶನ ಹಂಚಿಕೆ ಮಾಡಿರುವುದರಿಂದ ನಿವೇಶನದಾರರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ನಿವೇಶನದ ಅಕ್ಕಪಕ್ಕದಲ್ಲಿ ಹೈಟೆನ್ಷನ್ ವಿದ್ಯುತ್ ಲೈನ್ ಹಾದು ಹೋಗಿರುವ ಹಲವು ಪ್ರಕರಣಗಳಲ್ಲಿ ನಿವೇಶನದಾರರಿಗೆ ತೊಂದರೆಯಾಗಿರುವುದು ಗಮನಕ್ಕೆ ಬಂದಿರುತ್ತದೆ. ಈ ಬಡಾವಣೆಯಲ್ಲಿ ಸ್ವಾಧೀನವಾಗದ ಜಮೀನಿನಲ್ಲಿ ಯಾವುದೇ ನಿವೇಶನ ಹಂಚಿಕೆ ಮಾಡಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಈ ಸಮಸ್ಯೆಗಳ ಇತ್ಯರ್ಥಕ್ಕೆ ಕೈಗೊಂಡ ಕ್ರಮಗಳಾವುವು;	ಅಂತಹ ಪ್ರಕರಣಗಳಲ್ಲಿ ಬದಲಿ ನಿವೇಶನ ನೀಡಲು ಪರಿಶೀಲಿಸಲಾಗುವುದು.

ಈ)	ಸ್ವಾಧೀನವಾಗದ ಜಮೀನಿನಲ್ಲಿ ನಿವೇಶನ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ಹಾಗೂ ಕಾರಣರಾದವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು);	ಈ ಬಡಾವಣೆಯಲ್ಲಿ ಭೂಸ್ವಾಧೀನವಾಗದೇ ಇರುವ ಜಮೀನಿನಲ್ಲಿ ಯಾವುದೇ ನಿವೇಶನಗಳನ್ನು ರಚಿಸಿರುವುದಿಲ್ಲ.
ಉ)	ಕೆಂಪೇಗೌಡ ಬಡಾವಣೆಯಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ; ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ವೆಚ್ಚ ಮಾಡಿರುವ ಹಣ ಎಷ್ಟು;	ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಅಗತ್ಯ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು ಇಲ್ಲಿಯವರೆಗೆ ಬಡಾವಣೆ ರಚನೆಗಾಗಿ ರೂ.40214.35 ಲಕ್ಷಗಳು, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲು ದಿನಾಂಕ:24/02/2018 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ಇಲ್ಲಿಯವರೆಗೆ ರೂ.7249/- ಲಕ್ಷಗಳು ಹಾಗೂ ಬಡಾವಣೆಯಲ್ಲಿ ಹಾದು ಹೋಗುವ ಮುಖ್ಯ ಸಂಪರ್ಕ ರಸ್ತೆ ನಿರ್ಮಾಣಕ್ಕಾಗಿ ದಿನಾಂಕ:19/03/2018 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ಇಲ್ಲಿಯವರೆಗೆ ರೂ.382/- ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಸಂಖ್ಯೆ: ನಅಇ 655 ಬೆಂಭೂಸ್ವಾ 2018

(ಡಾ. ಜಿ ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1338
ಸದಸ್ಯರ ಹೆಸರು	:	ಶ್ರೀ ಮುನಿರತ್ನ (ರಾಜರಾಜೇಶ್ವರಿನಗರ)
ಉತ್ತರಿಸಬೇಕಾದ ದಿನಾಂಕ	:	12.12.2018
ಉತ್ತರಿಸಬೇಕಾದ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೊಸಕೆರೆಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಹಾಗಿದ್ದಲ್ಲಿ, ಅಭಿವೃದ್ಧಿಪಡಿಸಲಾಗುತ್ತಿರುವ ಕಾಮಗಾರಿ ವಿಳಂಭವಾಗಲು ಕಾರಣಗಳೇನು;	ಹೊಸಕೆರೆಹಳ್ಳಿ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಗುತ್ತಿಗೆದಾರರಿಗೆ ದಿನಾಂಕ: 24.06.2015 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ಅದರಂತೆ, ಗುತ್ತಿಗೆದಾರರು ಒತ್ತುವರಿ ಮುಕ್ತ ಹಾಗೂ ಮಲಿನ ನೀರು ಹರಿಯದೇ ಇರುವ ಪ್ರದೇಶದಲ್ಲಿ ಕಾಮಗಾರಿಯನ್ನು ಕೈಗೆತ್ತಕೊಂಡು ಕೆರೆಯ ದಕ್ಷಿಣ ಹಾಗೂ ಪಶ್ಚಿಮ ದಿಕ್ಕಿನಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ. Inlet drain, outlet drain ಕಾಮಗಾರಿಯು ಶೇ 80 ರಷ್ಟು ನಿರ್ವಹಿಸಿದ್ದು, ಬಾಕಿ ಉಳಿದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಕಂದಾಯ ಇಲಾಖೆವತಿಯಿಂದ ಹೊಸಕೆರೆಹಳ್ಳಿ ಕೆರೆಯ ಒತ್ತುವರಿಯನ್ನು ತೆರವು ಮಾಡಿ ಗಡಿಯನ್ನು ಗುರುತಿಸಿ ಕೊಡದೇ ಇರುವುದರಿಂದ, ಕೆರೆಯ ದಕ್ಷಿಣ ಮತ್ತು ಪೂರ್ವ ದಿಕ್ಕಿನಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಹಾಗೂ ಹಿಂದಿನ ತಿಂಗಳುಗಳಲ್ಲಿ ಸುರಿದ ಭಾರಿ ಮಳೆಯಿಂದಾಗಿ, ಕೆರೆಯಲ್ಲಿ ಹೆಚ್ಚಿನ ಮಲೀನ ನೀರು ಶೇಖರಣೆಯಾಗಿರುವ ಸಂಬಂಧ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರು ಹಾಗೂ ಸ್ಥಳೀಯ ಮುಖಂಡರು ರವರ ಸೂಚನೆ ಮೇರೆಗೆ ಸದರಿ ಮಲಿನ ನೀರನ್ನು ಕೆರೆಯಿಂದ ಹೊರಹಾಕಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಈ ಕಾರಣಗಳಿಂದಾಗಿ . ಕಾಮಗಾರಿಯ ಪ್ರಗತಿಯು ಕುಂಠಿತಗೊಂಡಿರುತ್ತದೆ.
ಇ)	ಸದರಿ ಗುತ್ತಿಗೆದಾರರಿಗೆ ನೀಡಿರುವ ಒಟ್ಟಾರೆ ಪ್ಯಾಕೇಜಿನ ಗುತ್ತಿಗೆ ಮೊತ್ತ ಎಷ್ಟು; ಸದರಿ ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲು ನೀಡಿರುವ ಅವಧಿ ಎಷ್ಟು; (ಕಾರ್ಯಾದೇಶದ ಪ್ರತಿ ಒದಗಿಸುವುದು)	ಗುತ್ತಿಗೆದಾರರಿಗೆ ನೀಡಿರುವ ಒಟ್ಟಾರೆ ಪ್ಯಾಕೇಜಿನ ಗುತ್ತಿಗೆ ಮೊತ್ತ ರೂ 912.31 ಲಕ್ಷಗಳು ಆಗಿರುತ್ತದೆ. ಕಾರ್ಯದೇಶದಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ನೀಡಿರುವ ಅವಧಿಯು 09 ತಿಂಗಳು. (ಕಾರ್ಯದೇಶದ ಪ್ರತಿಯನ್ನು ಲಗತ್ತಿಸಿದೆ)

ಈ)	ಕಾಮಗಾರಿಯನ್ನು ವಿಳಂಬ ಮಾಡುತ್ತಿರುವ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?	ಪ್ರಮುಖವಾಗಿ ಕಂದಾಯ ಇಲಾಖೆವತಿಯಿಂದ ಕೆರೆಯ ಗಡಿಯನ್ನು ಗುರುತಿಸದೇ ಇರುವುದು, ಈ ಹಿಂದಿನ ದಿವಸಗಳಲ್ಲಿ ಸುರಿದ ಬಾರಿ ಮಳೆಯಿಂದಾಗಿ ಕಾಮಗಾರಿಯು ಸ್ಥಗಿತಗೊಳಿಸಲಾಗಿದ್ದು, ನಂತರದ ದಿವಸಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಸಂಬಂಧ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ನೋಟೀಸ್ ಗಳನ್ನು ನೀಡಲಾಗಿದ್ದು, ಹಾಗೂ ಕಾಮಗಾರಿ ವಿಳಂಭವಾಗಿರುವ ಕಾರಣ ಗುತ್ತಿಗೆದಾರರಿಗೆ ನಿಯಮಾವಳಿಯಂತೆ ಕ್ರಮವಹಿಸಲಾಗುವುದು.
ಉ)	ಕಾಮಗಾರಿಯನ್ನು ವಿಳಂಬ ಮಾಡುತ್ತಿರುವ ಗುತ್ತಿಗೆದಾರರ ಹೆಸರನ್ನು ಯಾಕೆ ಕಪ್ಪು ಪಟ್ಟಿಯಲ್ಲಿ ಸೇರಿಸಿ ಕಾನೂನಿನ ಕ್ರಮ ಕೈಗೊಳ್ಳಬಾರದು?	ಕಾಮಗಾರಿಯ ವಿಳಂಬದ ಬಗ್ಗೆ ನಿಯಮಾವಳಿಯಂತೆ ಕ್ರಮವಹಿಸಲಾಗುವುದು.

ಸಂಖ್ಯೆ: ನಅಇ 658 ಬೆಂಭೂಸ್ವಾ 2018

(ಡಾ. ಜಿ ಪರಮೇಶ್ವರ)
ಉಪ ಮುಖ್ಯಮಂತ್ರಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

Bangalore Development Authority

No:BDA/EE(S)/WO/01/2015-16

[illegible]

Office of the Executive Engineer
South Division
Bengaluru Development Authority
BDA Shopping Complex, BSK 2nd Stage
Bengaluru-560070; Dated:24/06/2015.

-:: WORK ORDER ON TENDER ::-

Name of the Work :- Restoration and Development of Hosakerehalli Lake situated in SY No:15 of Hosakerehalli Village, Uttarahalli Hobli, Bengaluru South Taluk.

Ref :-
1. Authority Resolution vide No:20/2014-15, Dated:28/01/2015.
2. Tender Notification No:BDA/EE/S/Notification/T-221/2013-14, Dated:17/01/2014. (SL No:4)
3. Tender Reference No:BDA/2013-14/OW/WORK_INDENT1045

--*-*-*-*

The above item rate tender work has been entrusted to the tenderer, M/s.RMN Infrastructures Ltd., (R.Maheswara Naidu) at 19.76% below the updated cost (Work Portion) as per SR of 2014-15 amounting to Rs.9,12,31,595.80 by the Commissioner approval cited under reference.

Pursuant to signing of the contract agreement for the above work, you are hereby instructed to proceed with the said work in accordance with the instructions given by the Assistant Executive Engineer, No:2, South Sub-Division, BDA.

THE DETAILS ARE AS FOLLOWS :-

1.	Name of the Tenderer	:	M/s.RMN Infrastructures Ltd., (R.Maheswara Naidu)
2.	Sanction Order No	:	Sanction Register vide Page No:64; Item No:86
3.	Estimated Cost (Work Portion) as per SR of 2012-13	:	Rs.9,40,87,693.32
4.	Updated Cost (Work Portion) as per SR of 2014-15	:	Rs.11,37,05,063.00
5.	Cost as per Accepted Tender	:	Rs.9,12,31,595.80
ಆ	ಬಂದಿದ್ದಲ್ಲಿ, ನೆರಳು, ಕುಡಿಯುವ ನೀರು ಮತ್ತು ಶೌಚಾಲಯ ಮುಂತಾದ ಸೌಲಭ್ಯಗಳಿಂದ ವಂಚಿತವಾಗಿ ಕ್ರೀಡಾ ಪಟುಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಎಲ್ಲಾ ಮೂಲ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಮಂಡ್ಯ ನಗರದ ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಪೆವಿಲಿಯನ್ ಕಟ್ಟಡದಲ್ಲಿ ಪ್ರೇಕ್ಷಕರ ಗ್ಯಾಲರಿಗೆ ಮೇಲ್ಚಾವಣಿಯನ್ನು ನಿರ್ಮಿಸಿದ್ದು, ನೆರಳಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕ್ರೀಡಾಪಟುಗಳು ಹಾಗೂ ಪ್ರೇಕ್ಷಕರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿದೆ. ಅಲ್ಲದೇ, ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ಬ್ಲಾಕ್‌ಗಳಿದ್ದು, ಒಂದು ವಿಕಲಚೇತನರ ಶೌಚಾಲಯ ಬ್ಲಾಕ್ ನಿರ್ಮಾಣಕ್ಕೆ ನಿರ್ಮಿತಿ ಕೇಂದ್ರ, ಮಂಡ್ಯ ಇವರಿಗೆ ರೂ 7.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
ಇ	ಇಲ್ಲಿನ ಒಳಾಂಗಣ ಕ್ರೀಡಾಂಗಣವು ಕಳೆದ ವರ್ಷವೇ ಉದ್ಘಾಟನೆಯಾಗಿದ್ದರೂ ಇನ್ನೂ ಉಪಯೋಗಕ್ಕೆ ಬಾರದೇ ಕೆಲಸವು ಸಂಪೂರ್ಣ ಸ್ಥಗಿತಗೊಂಡಿರಲು ಕಾರಣಗಳೇನು? (ವಿವರ ನೀಡುವುದು)	ಮಂಡ್ಯ ನಗರದ ಒಳಾಂಗಣ ಕ್ರೀಡಾಂಗಣವನ್ನು ದಿನಾಂಕ: 18-03-2018 ರಂದು ಉದ್ಘಾಟನೆ ಮಾಡಲಾಗಿರುತ್ತದೆ. ಆದರೆ, ಮರದ ನೆಲಹಾಸಿನ ಕಾಮಗಾರಿಯು ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸಿರುವುದಿಲ್ಲ. ಪ್ರಸ್ತುತ, ಮರದ ನೆಲಹಾಸು ಕಾಮಗಾರಿಯು ಅಂತಿಮ ಹಂತದಲ್ಲಿದೆ. ಕಾಮಗಾರಿ ಪೂರ್ಣಗೊಂಡ ತಕ್ಷಣ ಒಳಾಂಗಣ ಕ್ರೀಡಾಂಗಣವನ್ನು ಕ್ರೀಡಾಪಟುಗಳ ಬಳಕೆಗೆ ಮುಕ್ತಗೊಳಿಸಲಾಗುವುದು.

ಸಂಖ್ಯೆ: ಯುಸೇಇ 69 ಯುಸೇಭಾ 2018.

(ಡಾ|| ಜಿ. ಪರಮೇಶ್ವರ್)
ಉಪ ಮುಖ್ಯಮಂತ್ರಿ

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1317
ಉತ್ತರಿಸುವ ದಿನಾಂಕ	: 12.12.2018
ಸದಸ್ಯರ ಹೆಸರು	: ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯಮಂತ್ರಿಯವರು,

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕ್ರೀಡಾ ಇಲಾಖೆಯ ವ್ಯಾಪ್ತಿಯಲ್ಲಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಸದರಿ ವಸತಿ ಶಾಲೆಗಳು ಯಾವಾಗ ಪ್ರಾರಂಭವಾಗಿರುತ್ತವೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34 ಕ್ರೀಡಾ ಶಾಲೆ/ವಸತಿ ನಿಲಯಗಳು ಇವೆ. ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಆ	ಕ್ರೀಡಾ ವಸತಿ ಶಾಲೆಗಳಲ್ಲಿ ಇರುವ ವಿದ್ಯಾರ್ಥಿ, ಕ್ರೀಡಾ ಪಟುಗಳ ಸಂಖ್ಯೆ ಎಷ್ಟು;	2018-19 ನೇ ಸಾಲಿನಲ್ಲಿ ಕ್ರೀಡಾ ವಸತಿ ಶಾಲೆಗಳಲ್ಲಿ ರಾಜ್ಯದಾದ್ಯಂತ ಒಟ್ಟು 2,170 ಕ್ರೀಡಾಪಟುಗಳು ಕ್ರೀಡಾ ತರಬೇತಿ ಪಡೆಯುತ್ತಿದ್ದಾರೆ.
ಇ	ಜಮಖಂಡಿ ಮತಕ್ಷೇತ್ರಕ್ಕೆ ಕ್ರೀಡಾ ವಸತಿ ನಿಲಯ ಶಾಲೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ

ಸಂಖ್ಯೆ: ಯುಸೇಇ 67 ಯುಸೇಭಾ-2018.

(ಡಾ|| ಜಿ. ಪರಮೇಶ್ವರ್)
ಉಪ ಮುಖ್ಯಮಂತ್ರಿ

ಅನುಬಂಧ-1

ಯುವ ಸಬಲೀಕರಣ ಮತ್ತು ಕ್ರೀಡಾ ಶಾಲೆ/ವಸತಿ ನಿಲಯಗಳ ವಿವರ

ಕ್ರ. ಸಂ	ಕ್ರೀಡಾ ಶಾಲೆ/ನಿಲಯಗಳು	ಪ್ರಾರಂಭವಾದ ವರ್ಷ
1	ಕೂಡಿಗೆ ಕ್ರೀಡಾ ಶಾಲೆ(ಕೊಡಗು ಜಿಲ್ಲೆ)	1982-83
2	ವಿದ್ಯಾನಗರ ಕ್ರೀಡಾ ಶಾಲೆ(ಬೆಂಗಳೂರು ಗ್ರಾಮಾಂತರ ಜಿಲ್ಲೆ)	1994-95
3	ಬೆಂಗಳೂರು, ಮೈಸೂರು, ಬೆಳಗಾವಿ, ವಿಜಯಪುರ, ದಾವಣಗೆರೆ	1995-96
4	ಪೊನ್ನಂಪೇಟೆ(ಕೊಡಗು ಜಿಲ್ಲೆ)	2002-03
5	ರಾಮನಗರ, ಕಾರವಾರ, ಹಳಿಯಾಳ (ಉತ್ತರ ಕನ್ನಡ ಜಿಲ್ಲೆ), ಚಿತ್ರದುರ್ಗ, ಚಾಮರಾಜನಗರ, ಧಾರವಾಡ, ಹಾವೇರಿ, ಮಂಗಳೂರು, ಕೊಪ್ಪಳ, ಶಿವಮೊಗ್ಗ, ಉಡುಪಿ, ಬಾಗಲಕೋಟೆ, ಬೀದರ್, ಚಿಕ್ಕಮಗಳೂರು, ಗದಗ, ಕೋಲಾರ, ಹಾಸನ, ಮಂಡ್ಯ, ರಾಯಚೂರು, ತುಮಕೂರು	2007-2008
6	ಚಿಕ್ಕಬಳ್ಳಾಪುರ, ಬಳ್ಳಾರಿ, ಕಲ್ಬುರ್ಗಿ	2015-16
7	ಸಂತೇಮಾರನಹಳ್ಳಿ(ಚಾಮರಾಜನಗರ ಜಿಲ್ಲೆ), ಮಡಿಕೇರಿ	2016-17
8	ಯಾದಗಿರಿ	2017-18

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	177
02.	ಸದಸ್ಯರ ಹೆಸರು	:	ಶ್ರೀ ಅಮೀನಪ್ಪಗೌಡ ಎಸ್. ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ)
03.	ಉತ್ತರಿಸುವ ದಿನಾಂಕ	:	12.12.2018
04.	ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಪೊಲೀಸ್ ಠಾಣೆಗಳು ಹಾಗೂ ಹೊರ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ; ಅವು ಯಾವುವು ಮತ್ತು ಸದರಿ ಪೊಲೀಸ್ ಠಾಣಾ ವ್ಯಾಪಿಗೆ ಯಾವ ಯಾವ ಗ್ರಾಮಗಳು ಬರುತ್ತವೆ (ವಿವರ ನೀಡುವುದು);	ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಕೆಳಗಿನ 03 ಪೊಲೀಸ್ ಠಾಣೆಗಳು ಹಾಗೂ 01 ಹೊರಠಾಣೆ ಕಾರ್ಯನಿರ್ವಹಿಸುತ್ತಿವೆ: **ಪೊಲೀಸ್ ಠಾಣೆ:** 1. ಮುದ್ದೆಬಿಹಾಳ ಪೊಲೀಸ್ ಠಾಣೆ 2. ತಾಳೀಕೋಟಿ ಪೊಲೀಸ್ ಠಾಣೆ 3. ನಿಡಗುಂದಿ ಪೊಲೀಸ್ ಠಾಣೆ **ಹೊರ ಠಾಣೆ:** 1. ನಾಲತವಾಡ ಹೊರ ಠಾಣೆ ಮೇಲ್ಕಂಡ ಪೊಲೀಸ್ ಠಾಣೆಗಳ ವ್ಯಾಪಿಗೆ ಬರುವ ಗ್ರಾಮಗಳ ಪಟ್ಟಿಯನ್ನು **"ಅನುಬಂಧ-ಅ"** ರಲ್ಲಿ ಒದಗಿಸಿದೆ.
ಆ)	ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ಹೊಸ ಪೊಲೀಸ್ ಠಾಣೆಗಳಿಗೆ ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ; ಅವು ಯಾವುವು ಮತ್ತು ಸದರಿ ಪೊಲೀಸ್ ಠಾಣೆಗಳ ಮಂಜೂರಾತಿ ಕೋರಿ ಪ್ರಸ್ತಾವನೆಗಳು ಯಾವ ವರ್ಷದಲ್ಲಿ ಬಂದಿದ್ದವು (ವಿವರ ನೀಡುವುದು);	ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ 36 ಹೊಸ ಪೊಲೀಸ್ ಠಾಣೆಗಳಿಗೆ ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ; ಅವುಗಳ ವಿವರ ಮತ್ತು ಪ್ರಸ್ತಾವನೆ ಸ್ವೀಕೃತವಾದ ವರ್ಷದ ಮಾಹಿತಿಯನ್ನು **"ಅನುಬಂಧ-ಆ"** ರಲ್ಲಿ ಒದಗಿಸಿದೆ.
ಇ)	ಕಳೆದ 3 ವರ್ಷಗಳಲ್ಲಿ ಹೊಸ ಪೊಲೀಸ್ ಠಾಣೆಗಳು ಮಂಜೂರು ಮಾಡುವುದಕ್ಕೆ ಎಷ್ಟು ಪ್ರಸ್ತಾವನೆಗಳು ಬಂದಿರುತ್ತವೆ; ಅವು ಯಾವುವು;	ಕಳೆದ 3 ವರ್ಷಗಳಲ್ಲಿ ಹೊಸ ಪೊಲೀಸ್ ಠಾಣೆಗಳು ಮಂಜೂರು ಮಾಡುವ ಸಂಬಂಧ ಒಟ್ಟು 35 ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ. ಅವುಗಳ ವಿವರವನ್ನು **"ಅನುಬಂಧ-ಇ"** ರಲ್ಲಿ ಒದಗಿಸಿದೆ.
ಈ)	ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ನಾಲತವಾಡ ಪಟ್ಟಣದಲ್ಲಿ ಹೊಸ ಪೊಲೀಸ್ ಠಾಣೆ ಮಂಜೂರಾತಿ ಕೋರಿ ಯಾವ ವರ್ಷದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ; ಇದುವರೆಗೂ ಮಂಜೂರಾತಿ ನೀಡದಿರಲು ಕಾರಣವೇನು;	ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ನಾಲತವಾಡ ಪಟ್ಟಣದಲ್ಲಿ ಹೊಸ ಪೊಲೀಸ್ ಠಾಣೆ ಮಂಜೂರಾತಿ ಕೋರಿ 2010ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯು ರಾಷ್ಟ್ರೀಯ ಪೊಲೀಸ್ ಆಯೋಗದ ಮಾನದಂಡಗಳನ್ನು ಪೂರೈಸದ ಕಾರಣ ಪ್ರಸ್ತಾವನೆಯನ್ನು ಇಲಾಖಾ ಹಂತದಲ್ಲಿಯೇ ಕೈಬಿಡಲಾಗಿದೆ.
ಉ)	ಸದರಿ ನಾಲತವಾಡ ಪಟ್ಟಣದಲ್ಲಿ ಕಾನೂನು ಸುವ್ಯವಸ್ಥೆ ಹಿತದೃಷ್ಟಿಯಿಂದ ಪ್ರಸಕ್ತ ಸಾಲಿನಲ್ಲಿ ಹೊಸ ಪೊಲೀಸ್ ಠಾಣೆ ಮಂಜೂರು ಮಾಡಲಾಗುವುದೇ; ಇಲ್ಲದಿದ್ದಲ್ಲಿ ಕಾರಣವೇನು (ವಿವರ ನೀಡುವುದು) ?	

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಒಇ 174 ಪಿಓಪಿ 2018

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಮೀನಪ್ಪಗೌಡ ಎಸ್. ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 177ಕ್ಕೆ ಸಂಬಂಧಿಸಿದಂತೆ ಅನುಬಂಧ-ಅ

1) ಮುದ್ದೇಬಿಹಾಳ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮುದ್ದೇಬಿಹಾಳ ಮತಕ್ಷೇತ್ರಕ್ಕೆ ಬರತಕ್ಕ ಒಟ್ಟು 84 ಹಳ್ಳಿಗಳು

01] ಮುದ್ದೇಬಿಹಾಳ ನಗರ 02] ರೂಡಗಿ. 03] ಢವಳಗಿ. 04] ತಾರನಾಳ 05] ಅಗಸಬಾಳ. 06] ಹಳ್ಳೂರ 07]ಬಸರಕೋಡ 08] ಗುಂಡಕರ್ಜಗಿ . 09] ಗುಡದಿನ್ನಿ 10] ಬಿದರಕುಂದಿ 11] ಗೋನಾಳಪಿ.ಎಸ್. 12] ಮೊದಿನಾಳ 13] ಹುಲ್ಲೂರ 14] ಬಳಬಟ್ಟಿ 15] ಮುದೂರ 16] .ಚೆಟ್ಟಗಿ 17] ಸಿದ್ದಾಪೂರ(ಪಿಟಿ). 18] ಕೊಪ್ಪ 19] ಕಂದಗನೂರ 20] ಚಿರ್ಚನಕಲ್ 21] ಕಾಳಗಿ. 22] ಚಲಮಿ 23] ಮಸೂತಿ 24]ವಡವಡಗಿ 25] ನೇಬಗೇರಿ. 26] ದೇವೂರ.. 27] ಕೋಳೂರ.28] ಮುದ್ನಾಳ 29] ಗೆದ್ದಲಮರಿ. 30] ಯರಜರಿ 31] ನಾಗರಾಳ 32] ಹರಿಂದ್ರಾಳ.33]ಬನೋಶಿ. 34] ಗೋನಾಳ ಎಸ್ಎಚ್ 35] ಹಡಲಗೇರಿ. 36] ಹಂಡರಗಲ್ 37] ತಂಗಡಗಿ. 38] ಕುಂಚಗನೂರ 39] ಕುಂಟೋಜಿ. 40] ಅಬ್ಬಿಹಾಳ.41] ಗಂಗೂರ. 42] ಕಮಲದಿನ್ನಿ. 43] ಜಲಪೂರ. 44] ಕವಡಿಮಟ್ಟಿ 45] ಶಿರೋಳ. 46] ಸರೂರ 47] ಅಮರಗೋಳ. 48] ಹಡಗಲಿ. 49] ಆಲೂರ . 50] ಕೇಶಾಪುರ. 51] ಯರಗಲ್ಲ. 52] ಹುನಕುಂಟಿ 53] ಮದರಿ .54] ಬೈಲಕೂರ 55] ಗರಸಂಗಿ .56] ಕಪನೂರ 57] ಹಿರೇಮುರಾಳ. 58] ಅರೆಮುರಾಳ 59] ನಾಗರಬೆಟ್ಟ . 60] ಮಾವಿನಬಾವಿ 61] ಬೂದಿಹಾಳ. 62] ಮಲಗಲದಿನ್ನಿ 63] ಅರಸನಾಳ.64] ಜಂಗಮುರಾಳ 65] ಕಿಲ್ಲಾರಹಟ್ಟಿ. 66] ಜೈನಾಪುರ 67] ನೆರಬೆಂಚಿ 68] ನಾಲತವಾಡ. 69] ಅಯ್ಯನಗುಡಿ 70] ಸುಲ್ತಾನಪೂರ. 71] ಕಾನಿಕೇರಿ. 72] ಬಿಜ್ಜೂರ 73] ಲೋಟಗೇರಿ 74] ವಿರೇಶನಗರ. 75] ನಾಗಬೇನಾಳ. 76] ಆರೇಶಂಕರ 77] ಬಲದಿನ್ನಿ. 78] ರಕ್ಕಸಗಿ. 79] ಕಾರಕೂರ. 80] ಬಂಗಾರಗುಂಡ.81] ಘಾಳಪೂಜಿ. 82] ಟಕ್ಕಳಕಿ. 83] ಇಂಗಳಗಿ. 84] ಆಲಕೊಪ್ಪರ ಈ ಪ್ರಕಾರ 84 ಗ್ರಾಮಗಳು ಬರುತ್ತಿದ್ದು ಅಲ್ಲದೇ 16 ತಾಂಡಾಗಳೂ ಸಹ ಇರುತ್ತವೆ.

2) ತಾಳಿಕೋಟಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮುದ್ದೇಬಿಹಾಳ ಮತಕ್ಷೇತ್ರಕ್ಕೆ ಬರತಕ್ಕ ಒಟ್ಟು 39 ಹಳ್ಳಿಗಳು

01] ತಾಳಿಕೋಟಿ 02] ಕಲ್ಲದೇವನಹಳ್ಳಿ. 03] ಹಡಗಿನಾಳ 04] ನಾಗೂರ. 05] ಹರನಾಳ 06] ಶಿವಪೂರ 07] ದೇವರಹುಲಗಬಾಳ.08] ಜಮ್ಮಲದಿನ್ನಿ 09] ಹಗರಗೊಂಡ 10] ಮೂಕಿಹಾಳ 11] ಹಿರೂರ 12]ಚೋಕಾವಿ 13] ತಮದಡ್ಡಿ 14] ಕೊಣ್ಣೂರ. 15] ಬಳಗಾನೂರ 16] ಪಡೇಕನೂರ 17] ಮಡಿಕೇಶ್ವರ. 18] ಚೊಂಡಿ 19] ಮಿಣಜಗಿ 20] ಕೂಚಬಾಳ 21] ಬಾವೂರ 22] ಅಂಗಡಗೇರಿ 23] ವನಹಳ್ಳಿ 24] ನಡಹಳ್ಳಿ 25] ಹಂಪ್ರಾಳ 26] ಬಳವಾಟ 27] ಗುಡಿಹಾಳ 28] ಇಂಗಳಗೇರಿ 29] ಗುಡ್ನಾಳ 30] ಇಣಚಗಲ್ 31] ಜಕ್ಕೇರಿಹಾಳ 32] ಹೋಕ್ರಾಣಿ 33] ಖ್ಯಾತನಡೋಣಿ 34] ಡೊಂಕಮಡು 35] ಅಡವಿಹುಲಗಬಾಳ 36] ಅಡವಿಸೋಮನಾಳ 37] ಗೋನಾಳ.ಎಸ್.ಎಚ್. 38] ವಣಿಕಿಹಾಳ 39] ಚವನಭಾವಿ

3) ನಿಡಗುಂದಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮುದ್ದೇಬಿಹಾಳ ಮತಕ್ಷೇತ್ರಕ್ಕೆ ಬರತಕ್ಕ ಒಟ್ಟು 03 ಹಳ್ಳಿಗಳು

01] ಯಲಗೂರ 02] ಕಾಶಿನಕುಂಟಿ 03] ಯ ಬೂದಿಹಾಳ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಮೀನಪ್ಪಗೌಡ ಎಸ್. ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 177ಕ್ಕೆ ಸಂಬಂಧಿಸಿದಂತೆ ಅನುಬಂಧ–ಆ

2015–16 ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರಾದ ಪೊಲೀಸ್ ಠಾಣೆಗಳ ವಿವರ

ಕ್ರ. ಸಂ	ಪೊಲೀಸ್ ಠಾಣೆಗಳು	ಪ್ರಸ್ತಾವನೆ ಸಲ್ಲಿಸಿದ ವರ್ಷ	ಮಂಜೂರಾತಿ ಆದೇಶಗೊಂಡ ವರ್ಷ
1.	ಅಂಗರಾಜಪುರಂ ಪೊಲೀಸ್ ಠಾಣೆ, ಬೆಂಗಳೂರು ನಗರ	2015	2015–16
2.	ಆಲನಹಳ್ಳಿ ಪೊಲೀಸ್ ಠಾಣೆ, ಮೈಸೂರು ನಗರ		
3.	ಹೆಬ್ಬಾಳ ಪೊಲೀಸ್ ಠಾಣೆ, ಮೈಸೂರು ಜಿಲ್ಲೆ		
4.	ಸಂಚಾರ ದಕ್ಷಿಣ ಪೊಲೀಸ್ ಠಾಣೆ, ಮಂಗಳೂರು ನಗರ		
5.	ನೆಲಮಂಗಲ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು (ಗ್ರಾ) ಜಿಲ್ಲೆ		
6.	ಮುಳಬಾಗಿಲು (ಗ್ರಾ) ಪೊಲೀಸ್ ಠಾಣೆ, ಕೋಲಾರ ಜಿಲ್ಲೆ		
7.	ಚನ್ನಪಟ್ಟಣ ಸಂಚಾರ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ		
8.	ಹಳ್ಳಿ ಮೈಸೂರು ಪೊಲೀಸ್ ಠಾಣೆ, ಹಾಸನ ಜಿಲ್ಲೆ		
9.	ಹಾವೇರಿ ಸಂಚಾರ ಪೊಲೀಸ್ ಠಾಣೆ, ಹಾವೇರಿ ಜಿಲ್ಲೆ		
10.	ಚಿತ್ರದುರ್ಗ ಬಡಾವಣೆ ಪೊಲೀಸ್ ಠಾಣೆ, ಚಿತ್ರದುರ್ಗ ಜಿಲ್ಲೆ		
11.	ಕುಂದಾಪುರ (ಗ್ರಾ) ಪೊಲೀಸ್ ಠಾಣೆ, ಉಡುಪಿ ಜಿಲ್ಲೆ		
12.	ಚಿಕ್ಕೋಡಿ (ಗ್ರಾ) ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ		
13.	ಇಂಡಿ (ಗ್ರಾ) ಪೊಲೀಸ್ ಠಾಣೆ, ವಿಜಯಪುರ ಜಿಲ್ಲೆ		
14.	ಕೂಡಗಿ ಪೊಲೀಸ್ ಠಾಣೆ (ಎನ್‌ಟಿಪಿಸಿ), ವಿಜಯಪುರ ಜಿಲ್ಲೆ		
15.	ಇಳಕಲ್ (ಗ್ರಾ) ಪೊಲೀಸ್ ಠಾಣೆ, ಬಾಗಲಕೋಟೆ ಜಿಲ್ಲೆ		
16.	ಯಾದಗಿರಿ ಸಂಚಾರ ಪೊಲೀಸ್ ಠಾಣೆ, ಯಾದಗಿರಿ ಜಿಲ್ಲೆ		
17.	ಕುಶಾಲನಗರ ಸಂಚಾರ ಪೊಲೀಸ್ ಠಾಣೆ, ಕೊಡಗು ಜಿಲ್ಲೆ		
18.	ಬೆಳ್ಳಾರೆ ಪೊಲೀಸ್ ಠಾಣೆ, ದಕ್ಷಿಣ ಕನ್ನಡ ಜಿಲ್ಲೆ		
19.	ಕಂಕನಾಡಿ ನಗರ ಪೊಲೀಸ್ ಠಾಣೆ, (ಮಂಗಳೂರು ಆಯುಕ್ತಾಲಯ), ದಕ್ಷಿಣ ಕನ್ನಡ ಜಿಲ್ಲೆ		
20.	ಕೆ.ಜಿ.ಹಳ್ಳಿ ಸಂಚಾರ ಪೊಲೀಸ್ ಠಾಣೆ		
21.	ರಾಮನಗರ ಮಹಿಳಾ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ		
22.	ಚಿಕ್ಕಬಳ್ಳಾಪುರ ಮಹಿಳಾ ಪೊಲೀಸ್ ಠಾಣೆ, ಚಿಕ್ಕಬಳ್ಳಾಪುರ ಜಿಲ್ಲೆ		
23.	ಮೈಸೂರು ಮಹಿಳಾ ಪೊಲೀಸ್ ಠಾಣೆ, ಮೈಸೂರು ಜಿಲ್ಲೆ		
24.	ಕೊಡಗು ಮಹಿಳಾ ಪೊಲೀಸ್ ಠಾಣೆ, ಕೊಡಗು ಜಿಲ್ಲೆ		
25.	ಮಂಡ್ಯ ಮಹಿಳಾ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ		
26.	ಕಾರವಾರ ಮಹಿಳಾ ಪೊಲೀಸ್ ಠಾಣೆ, ಉತ್ತರ ಕನ್ನಡ ಜಿಲ್ಲೆ		
27.	ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆ, ಚಿಕ್ಕಮಗಳೂರು ಜಿಲ್ಲೆ		
28.	ಬೆಳಗಾವಿ ಮಹಿಳಾ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ		
29.	ಕೊಪ್ಪಳ ಮಹಿಳಾ ಪೊಲೀಸ್ ಠಾಣೆ, ಕೊಪ್ಪಳ ಜಿಲ್ಲೆ		
30.	ಬಳ್ಳಾರಿ ಮಹಿಳಾ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ		

2016–17ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರಾದ ಪೊಲೀಸ್ ಠಾಣೆಗಳ ವಿವರ:

ಕ್ರ. ಸಂ.	ಪೊಲೀಸ್ ಠಾಣೆಗಳು	ಪ್ರಸ್ತಾವನೆ ಸಲ್ಲಿಸಿದ ವರ್ಷ	ಮಂಜೂರಾತಿ ಆದೇಶಗೊಂಡ ವರ್ಷ
1.	ಮಹಿಳಾ ಪೊಲೀಸ್ ಠಾಣೆ, ಬೆಂಗಳೂರು ಜಿಲ್ಲೆ	2016	2016–17
2.	ಮಹಿಳಾ ಪೊಲೀಸ್ ಠಾಣೆ, ದ.ಕ. ಜಿಲ್ಲೆ		
3.	ಮಹಿಳಾ ಪೊಲೀಸ್ ಠಾಣೆ, ಗದಗ ಜಿಲ್ಲೆ		
4.	ಮಹಿಳಾ ಪೊಲೀಸ್ ಠಾಣೆ, ಧಾರವಾಡ ಜಿಲ್ಲೆ		
5.	ಮಹಿಳಾ ಪೊಲೀಸ್ ಠಾಣೆ, ಯಾದಗಿರಿ ಜಿಲ್ಲೆ		
6.	ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಉಪವಿಭಾಗ ವ್ಯಾಪ್ತಿಯ ಬೆಳ್ತಂಗಡಿ ತಾಲ್ಲೂಕು ಕೇಂದ್ರದಲ್ಲಿ ಸಂಚಾರಿ ಪೊಲೀಸ್ ಠಾಣೆ		

2017–18ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರಾದ ಪೊಲೀಸ್ ಠಾಣೆಗಳ ವಿವರ:

2017–18ನೇ ಸಾಲಿನಲ್ಲಿ ಯಾವುದೇ ಪೊಲೀಸ್ ಠಾಣೆಗಳು ಮಂಜೂರಾಗಿರುವುದಿಲ್ಲ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಮೀನಪ್ಪಗೌಡ ಎಸ್. ಪಾಟೀಲ್ (ನಡಹಳ್ಳಿ) (ಮುದ್ದೇಬಿಹಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 177ಕ್ಕೆ ಸಂಬಂಧಿಸಿದಂತೆ ಅನುಬಂಧ-೩

ಕ್ರ.ಸಂ.	ವರ್ಷ	ಜಿಲ್ಲೆ	ಪ್ರಸ್ತಾವನೆಗಳ ವಿವರ
1.	2015-16	ಬೆಳಗಾವಿ ಜಿಲ್ಲೆ	ಬೆಳಗಾವಿ ಜಿಲ್ಲೆಯ ಕೊಣ್ಣೂರ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ
2.		ಬೆಂಗಳೂರು ನಗರ	ಕುಂಬಳಗೋಡು ಸಂಚಾರಿ ಪೊಲೀಸ್ ಠಾಣೆ
3.			ಬಸವೇಶ್ವರನಗರ ಸಂಚಾರಿ ಪೊಲೀಸ್ ಠಾಣೆ
4.			ಕೆ.ಜಿ.ಹಳ್ಳಿ ಸಂಚಾರಿ ಪೊಲೀಸ್ ಠಾಣೆ
5.			ಜೆ.ಪಿ.ನಗರ ಸಂಚಾರಿ ಪೊಲೀಸ್ ಠಾಣೆ
6.	2016-17	ದಕ್ಷಿಣ ಕನ್ನಡ ಜಿಲ್ಲೆ	ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಕಲ್ಲಡ್ಕದಲ್ಲಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
7.		ದಕ್ಷಿಣ ಕನ್ನಡ ಜಿಲ್ಲೆ	ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಫರಂಗಿಪೇಟೆಯಲ್ಲಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
8.		ಚಿಕ್ಕಬಳ್ಳಾಪುರ ಜಿಲ್ಲೆ	ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಯಲ್ಲಿ ಸಂಚಾರಿ ಠಾಣೆ ತೆರೆಯುವ ಬಗ್ಗೆ
9.		ರಾಮನಗರ ಜಿಲ್ಲೆ	ರಾಮನಗರ ಜಿಲ್ಲೆ ಬಿಡದಿಯಲ್ಲಿ ಸಂಚಾರಿ ಠಾಣೆ ತೆರೆಯುವ ಬಗ್ಗೆ
10.		ದಾವಣಗೆರೆ ಜಿಲ್ಲೆ	ದಾವಣಗೆರೆ ಜಿಲ್ಲೆಯ ನಲ್ಲೂರು ಪೊಲೀಸ್ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ
11.		ಮೈಸೂರು ಜಿಲ್ಲೆ	ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಚುಂಚನಕಟ್ಟೆ ಉಪಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ
12.		ತುಮಕೂರು ಜಿಲ್ಲೆ	ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ನಿಟ್ಟೂರು ಗ್ರಾಮದಲ್ಲಿ ಪೊಲೀಸ್ ಠಾಣೆ
13.		ತುಮಕೂರು ಜಿಲ್ಲೆ	ಶಿರಾ ನಗರದಲ್ಲಿ ಹೊಸದಾಗಿ ಶಿರಾ ಗ್ರಾಮಾಂತರ ಪೊಲೀಸ್ ಠಾಣೆ
14.		ಬೆಳಗಾವಿ ಜಿಲ್ಲೆ	ಬೆಳಗಾವಿ ಜಿಲ್ಲೆಯ ಅಥಣಿ ಶಹರದಲ್ಲಿ ಹೊಸದಾಗಿ ಗ್ರಾಮೀಣ ಪೊಲೀಸ್ ಠಾಣೆ
15.		ಉಡುಪಿ ಜಿಲ್ಲೆ	ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು ಬಜಗೋಳಿಪೇಟೆಯಲ್ಲಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
16.		ಬೆಳಗಾವಿ ಜಿಲ್ಲೆ	ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ಶಹರ ಪೊಲೀಸ್ ಠಾಣೆ ಸ್ಥಾಪಿಸುವ ಬಗ್ಗೆ
17.		ಬೆಂಗಳೂರು ನಗರ	ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ
18.	2017-18	ತುಮಕೂರು ಜಿಲ್ಲೆ	ತುಮಕೂರು ಜಿಲ್ಲೆ ಪಾವಗಡದಲ್ಲಿ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
19.		ಉತ್ತರ ಕನ್ನಡ ಜಿಲ್ಲೆ	ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
20.		ಮೈಸೂರು ಜಿಲ್ಲೆ	ಶ್ರೀರಂಗಪಟ್ಟಣದಲ್ಲಿ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
21.		ಹಾವೇರಿ ಜಿಲ್ಲೆ	ಹಾವೇರಿ ಜಿಲ್ಲೆ ಹಾನಗಲ್ಲು ತಾಲ್ಲೂಕಿನ ಅಕ್ಕಿಆಲೂರು ಪೊಲೀಸ್ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ
22.		ಶಿವಮೊಗ್ಗ ಜಿಲ್ಲೆ	ಆನಂದಪುರ ಪೊಲೀಸ್ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಹಾಗೂ ಸಾಗರ ಪಟ್ಟಣದಲ್ಲಿ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
23.		ಚಿತ್ರದುರ್ಗ ಜಿಲ್ಲೆ	ಚಳ್ಳಕೆರೆ ನಗರದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆ ತೆರೆಯುವ ಬಗ್ಗೆ
24.		ಬೆಂಗಳೂರು ಜಿಲ್ಲೆ	ಬೆಂಗಳೂರು ಜಿಲ್ಲೆ ಕಡಬಗೆರೆ ಪೊಲೀಸ್ ಠಾಣೆ ತೆರೆಯುವ ಬಗ್ಗೆ
25.		ಉತ್ತರ ಕನ್ನಡ ಜಿಲ್ಲೆ	ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಶಹರಕ್ಕೆ ಸಂಚಾರಿ ಪೊಲೀಸ್ ಠಾಣೆ
26.		ಬೆಳಗಾವಿ ಜಿಲ್ಲೆ	ಬೆಳಗಾವಿ ಜಿಲ್ಲೆಯ ಅಂಕಲಿ ತಾಲ್ಲೂಕಿನ ಯಕ್ಸಂಬಾ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ
27.		ಧಾರವಾಡ ಜಿಲ್ಲೆ	ಧಾರವಾಡ ಜಿಲ್ಲೆಯ ಹೈಕೋರ್ಟ್ ವ್ಯಾಪ್ತಿಯಲ್ಲಿ ಹೊಸದಾಗಿ ಪೊಲೀಸ್ ಠಾಣೆ
28.		ಬೆಳಗಾವಿ ಜಿಲ್ಲೆ	ಬೆಳಗಾವಿ ಜಿಲ್ಲೆಯ ಗೋಕಾಕ ಶಹರದಲ್ಲಿ ಸಂಚಾರಿ ಠಾಣೆ
29.		ಹುಬ್ಬಳ್ಳಿ-ಧಾರವಾಡ ನಗರ	ಧಾರವಾಡ ಉಪನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ (KUD) ಹೊಸ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ
30.		ಹುಬ್ಬಳ್ಳಿ-ಧಾರವಾಡ ನಗರ	ಧಾರವಾಡ ನಗರದ ಸತ್ತೂರ ಬಡಾವಣೆಯಲ್ಲಿ ಹೊಸದಾಗಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
31.		ವಿಜಯಪುರ ಜಿಲ್ಲೆ	ವಿಜಯಪುರ ಶಹರದಲ್ಲಿ ಇನ್ನೊಂದು ಹೊಸದಾಗಿ ಉತ್ತರ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ
32.		ಹುಬ್ಬಳ್ಳಿ-ಧಾರವಾಡ ನಗರ	ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮೀಷನರೇಟ್ ಘಟಕದಲ್ಲಿರುವ ಹುಬ್ಬಳ್ಳಿ ಶಹರದಲ್ಲಿ ಹೊಸದಾಗಿ ಹುಬ್ಬಳ್ಳಿ ಪಶ್ಚಿಮ ಸಂಚಾರ ಪೊಲೀಸ್ ಠಾಣೆ ತೆರೆಯುವ ಬಗ್ಗೆ
33.		ಧಾರವಾಡ ಜಿಲ್ಲೆ	ಧಾರವಾಡ ಜಿಲ್ಲೆ ಕುಂದಗೋಳ ಉಪವಿಭಾಗ ಸೃಜಿಸುವ ಬಗ್ಗೆ
34.		ಬೀದರ್ ಜಿಲ್ಲೆ	ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ನಿಟ್ಟೂರ (ಬಿ) ಗ್ರಾಮದ ಪೊಲೀಸ್ ಹೊರ(ಉಪಠಾಣೆ) ಠಾಣೆಯನ್ನು ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ
35.		ಬೆಂಗಳೂರು ನಗರ	ಮಹದೇವಪುರ ಸಂಚಾರಿ ಪೊಲೀಸ್ ಠಾಣೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 12
ಉತ್ತರಿಸುವ ದಿನಾಂಕ : 12.12.2018
ಸದಸ್ಯರ ಹೆಸರು : ಶ್ರೀ ಪ್ರಭು ಬಿ. ಚೌವ್ಹಾಣ್ (ಔರಾದ್)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಯವರು.

ಕ್ರಸಂ.	ಪ್ರಶ್ನೆ	ಉತ್ತರ
ಅ	ಬೀದರ್ ಜಿಲ್ಲೆ ಔರಾದ್ ಮತಕ್ಷೇತ್ರದ ವ್ಯಾಪ್ತಿಯ ಸಾಕಷ್ಟು ಯುವಕರು ಕ್ರೀಡಾ ಪಟುಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಬಂದಿದೆ.
ಆ	ಹಾಗಿದ್ದಲ್ಲಿ, ಈ ಕ್ರೀಡಾಪಟುಗಳನ್ನು ಉತ್ತೇಜಿಸಲು ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು; ಅವುಗಳ ರೂಪುರೇಷೆಗಳೇನು;	ಕ್ರೀಡಾಪಟುಗಳನ್ನು ಉತ್ತೇಜಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ರೂಪಿಸಲಾದ ಕಾರ್ಯಕ್ರಮಗಳು ಹಾಗೂ ಅವುಗಳ ರೂಪು-ರೇಷೆಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಇ	ಸದರಿ ಮತಕ್ಷೇತ್ರದಲ್ಲಿ ಗರಡಿ ಪಟುಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸದರಿ ಕ್ರೀಡಾಪಟುಗಳ ಅನುಕೂಲಕ್ಕಾಗಿ ಗರಡಿ ಮನೆ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಹೌದು, ಬಂದಿದೆ. ಔರಾದ್ ಮತಕ್ಷೇತ್ರ ಸೇರಿದಂತೆ ರಾಜ್ಯದಾದ್ಯಂತ ವಿವಿಧ ಭಾಗಗಳಿಂದ ಗರಡಿ ಮನೆಗಳ ನಿರ್ಮಾಣಕ್ಕೆ ಅನುದಾನ ಕೋರಿ ಒಟ್ಟು 576 ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ. ಅನುದಾನದ ಲಭ್ಯತೆ ಆಧರಿಸಿ, ಗರಡಿ ಮನೆಗಳ ನಿರ್ಮಾಣ ಮಾಡಲಾಗುವುದು.
ಈ	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಗರಡಿ ಮನೆ ನಿರ್ಮಾಣ ಮಾಡಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲಾಗುವುದು; ಹಾಗಿಲ್ಲದಿದ್ದಲ್ಲಿ, ಕಾರಣಗಳೇನು; (ಕಳೆದ ಮೂರು ವರ್ಷಗಳಿಂದ ಇದುವರೆವಿಗೂ ಪೂರ್ಣ ವಿವರ ನೀಡುವುದು)?	ಗರಡಿ ಮನೆಗಳ ನಿರ್ಮಾಣಕ್ಕೆ ಅನುದಾನ ಕೋರಿ ರಾಜ್ಯದ ವಿವಿಧ ಭಾಗಗಳಿಂದ ಒಟ್ಟು 576 ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ. 2018-19 ನೇ ಸಾಲಿನಲ್ಲಿ ಗರಡಿ ಮನೆಗಳ ನಿರ್ಮಾಣಕ್ಕಾಗಿ ರೂ.152.00 ಲಕ್ಷ ಮಾತ್ರ ಲಭ್ಯವಿದ್ದು, ಅನುದಾನದ ಲಭ್ಯತೆ ಆಧರಿಸಿ, ಔರಾದ್ ಮತಕ್ಷೇತ್ರದಲ್ಲಿ ಗರಡಿ ಮನೆಗಳ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡುವ ಬಗ್ಗೆ ಪರಿಗಣಿಸಲಾಗುವುದು. ಕಳೆದ ಮೂರು ಸಾಲುಗಳಲ್ಲಿ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಯಾವುದೇ ಗರಡಿ ಮನೆಗಳ ನಿರ್ಮಾಣ ಕಾರ್ಯ ಕೈಗೊಂಡಿರುವುದಿಲ್ಲ.

ಸಂಖ್ಯೆ: ಯುಸೇಇ 68 ಯುಸೇಭಾ 2018.

(ಡಾ|| ಜಿ. ಪರಮೇಶ್ವರ್)
ಉಪ ಮುಖ್ಯಮಂತ್ರಿ

ಅನುಬಂಧ-1

ಕ್ರೀಡಾಪಟುಗಳನ್ನು ಉತ್ತೇಜಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಾರ್ಯಕ್ರಮಗಳು

1. **ಶೈಕ್ಷಣಿಕ ಶುಲ್ಕ ಮರುಪಾವತಿ**. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಲಾದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡಲಾಗುತ್ತಿದೆ.
2. **ಕ್ರೀಡಾ ವಿದ್ಯಾರ್ಥಿ ವೇತನ**: ರಾಜ್ಯ ಮಟ್ಟದಲ್ಲಿ ಪದಕ ವಿಜೇತರಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ 10,000/- ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
3. **ಏಕಲವ್ಯ ಪ್ರಶಸ್ತಿ**: ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಲಾದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುವುದು. ಈ ಪ್ರಶಸ್ತಿಯು ರೂ. 2.00 ಲಕ್ಷ, ಸಮವಸ್ತ್ರ, ಕಂಚಿನ ಪ್ರತಿಮೆ ಒಳಗೊಂಡಿರುತ್ತದೆ.
4. **ಜೀವಮಾನ ಸಾಧನೆ ಪ್ರಶಸ್ತಿ**: ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ರಾಜ್ಯದ ತರಬೇತುದಾರರಿಗೆ ಅವರ ಜೀವಮಾನ ಸಾಧನೆಗೆ ಪ್ರಶಸ್ತಿ ನೀಡಲಾಗುವುದು. ಈ ಪ್ರಶಸ್ತಿಯು ರೂ.1.50 ಲಕ್ಷ, ಸಮವಸ್ತ್ರ, ಕಂಚಿನ ಪ್ರತಿಮೆ ಒಳಗೊಂಡಿರುತ್ತದೆ.
5. **ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ**: ದೇಸೀ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಈ ಪ್ರಶಸ್ತಿಯು ರೂ. 1.00 ಲಕ್ಷಗಳ ನಗದು, ಸಮವಸ್ತ್ರ, ಪ್ರಶಸ್ತಿ ಫಲಕ ಒಳಗೊಂಡಿರುತ್ತದೆ.
6. **ಕ್ರೀಡಾ ಶಾಲೆ/ನಿಲಯ**: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯದಲ್ಲಿ 33 ಕ್ರೀಡಾ ಶಾಲೆ/ವಸತಿ ನಿಲಯಗಳನ್ನು ನಿರ್ವಹಿಸುತ್ತಿದ್ದು, ಉಚಿತವಾಗಿ ಕ್ರೀಡಾ ತರಬೇತಿ, ಊಟೋಪಚಾರ, ವಸತಿ, ಕ್ರೀಡಾ ಕಿಟ್, ವಿಮಾ ಸೌಲಭ್ಯ ಒದಗಿಸುತ್ತಿದೆ. 2016-17 ನೇ ಸಾಲಿನಲ್ಲಿ ಮಡಿಕೇರಿ, ಚಿಕ್ಕಬಳ್ಳಾಪುರ, ಬಳ್ಳಾರಿ, ಚಾಮರಾಜನಗರ ಜಿಲ್ಲೆಯ ಸಂತೆಮಾರನಹಳ್ಳಿ ಮತ್ತು ಕಲ್ಬುರ್ಗಿಗಳಲ್ಲಿ ಕ್ರೀಡಾ ವಸತಿ ಶಾಲೆಗಳನ್ನು ಆರಂಭಿಸಲಾಗಿದೆ. ಯಾದಗಿರಿಯಲ್ಲಿ 2017-18 ನೇ ಸಾಲಿನಿಂದ ಜಿಲ್ಲಾ ಕ್ರೀಡಾ ಶಾಲೆ ಆರಂಭಿಸಲಾಗಿದೆ.
7. **ವೃತ್ತಿಪರ ಶಿಕ್ಷಣ ಪ್ರವೇಶದಲ್ಲಿ ಕ್ರೀಡಾ ಮೀಸಲಾತಿ**: ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕ್ರೀಡಾ ಮೀಸಲಾತಿ ಅಡಿಯಲ್ಲಿ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ಮುಂತಾದ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ.
8. **ನಗದು ಪುರಸ್ಕಾರ**: ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ಯೋಜನೆಯನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದೆ.
9. **ಕ್ರೀಡಾ ಶ್ರೇಷ್ಠತಾ ಕೇಂದ್ರ (Sports Academy for Excellence)**: ಸ್ಥಾಪಿಸಿ ಕರ್ನಾಟಕದ ಕ್ರೀಡಾಪಟುಗಳಿಗೆ ಅಂತರ ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು, ವಿದೇಶದಲ್ಲಿ ಕ್ರೀಡಾ ತರಬೇತಿ ಪಡೆಯಲು ಧನ ಸಹಾಯ, ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಲು ದೈಹಿಕ ಸಾಮರ್ಥ್ಯ ಹೆಚ್ಚಿಸಲು ಪೌಷ್ಠಿಕ ಆಹಾರದ ಜೊತೆಗೆ ಅಗತ್ಯ ಕ್ರೀಡಾ ಉಪಕರಣಗಳಿಗೆ ಧನ ಸಹಾಯ ನೀಡಲಾಗುತ್ತಿದೆ. ಅಲ್ಲದೇ, ಪರಿಶಿಷ್ಟ ಜಾತಿ ಮತ್ತು ಪಂಗಡದ ಯುವಜನರಿಗೆ ವೃತ್ತಿ ಕೌಶಲ್ಯ, ಸಾಹಸ ಕ್ರೀಡಾ ಪ್ರಶಿಕ್ಷಕರ ತರಬೇತಿ ಹಾಗೂ ಪೈಲೆಟ್ ತರಬೇತಿ ನೀಡಲಾಗುತ್ತಿದೆ.
10. **ಕ್ರೀಡಾ ಮೂಲ ಸೌಕರ್ಯಗಳ ನಿರ್ಮಾಣ**: ಜಿಲ್ಲಾ ಕ್ರೀಡಾಂಗಣಗಳು, ತಾಲ್ಲೂಕು ಕ್ರೀಡಾಂಗಣಗಳು, ಈಜುಕೊಳಗಳು, ಒಳಾಂಗಣ ಕ್ರೀಡಾಂಗಣಗಳು, ಸಿಂಥೆಟಿಕ್ ಅಥ್ಲೆಟಿಕ್ಸ್ ಟ್ರ್ಯಾಕ್‌ಗಳು, ಹಾಕಿ ಟರ್ಫ್‌ಗಳು, ಜಿಮ್‌ಗಳು, ಗರಡಿ ಮನೆಗಳು ಮೊದಲಾದ ಕ್ರೀಡಾ ಮೂಲ ಸೌಕರ್ಯಗಳನ್ನು ಕ್ರೀಡಾಪಟುಗಳ ತರಬೇತಿಗಾಗಿ ಸೃಜಿಸಲಾಗುತ್ತಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	245
ಸದಸ್ಯರ ಹೆಸರು	:	ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
ಉತ್ತರಿಸಬೇಕಾದ ದಿನಾಂಕ	:	12.12.2018
ಉತ್ತರಿಸಬೇಕಾದ ಸಚಿವರು	:	ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರು

	ಪ್ರಶ್ನೆ	ಉತ್ತರ
ಅ)	ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಅನಧಿಕೃತ ಬಡಾವಣೆಗಳಲ್ಲಿನ ಕಟ್ಟಡಗಳಿಗೆ ವಿಧಿಸುವ ಕರದ ಮೇಲಿನ ದಂಡ ಹೆಚ್ಚಾಗಿರುವುದು ಸರ್ಕಾರದ ಗಮನದಲ್ಲಿದೆಯೇ:	ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ವ್ಯಾಪ್ತಿಯಲ್ಲಿ ಬರುವ ಅನಧಿಕೃತ ಬಡಾವಣೆಯಲ್ಲಿ ನಿರ್ಮಿತವಾದ ಅನಧಿಕೃತ ಕಟ್ಟಡಗಳಿಗೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಅಡಿಯಲ್ಲಿ ಸನ್ 2002-03 ರಿಂದ ಅನಧಿಕೃತ ಕಟ್ಟಡಗಳಿಗೆ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ರ ಕಲಂ 112ಅ ರನ್ವಯ ಅನಧಿಕೃತ ಕಟ್ಟಡದ ಮೇಲೆ ವಿಧಿಸತಕ್ಕ ಸ್ವತ್ತು ತೆರಿಗೆಯ ಶೇ.2 ರಷ್ಟು ಸಮನಾದ ದಂಡವನ್ನು ಮಹಾನಗರ ಪಾಲಿಕೆಯಿಂದ ವಸೂಲು ಮಾಡಲಾಗುತ್ತಿದೆ ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ರ ಕಲಂ 112(3) ರನ್ವಯ ನಿಗದಿತ ಅವಧಿಯಲ್ಲಿ ದಂಡ ರಹಿತವಾಗಿ ಆಸ್ತಿ ತೆರಿಗೆ ಸಂದಾಯಿಸಲು ಅವಕಾಶವಿದ್ದು, ನಿಗದಿತ ಅವಧಿಯೊಳಗಾಗಿ ಆಸ್ತಿ ತೆರಿಗೆಯನ್ನು ಸಂದಾಯಿಸಲು ವಿಫಲರಾದಲ್ಲಿ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ರ ಕಲಂ 112(4) ರನ್ವಯ ಪ್ರತಿ ತಿಂಗಳು ಪ್ರತಿ ಶೇ. 2% ದಂಡವನ್ನು ವಿಧಿಸಲು ಕಾನೂನಿನಲ್ಲಿ ಅವಕಾಶವಿರುತ್ತದೆ. ಪರಂತು ನಿಯಮವನ್ನು ಹೊರತುಪಡಿಸಿ ಆಸ್ತಿ ತೆರಿಗೆ ಮೇಲೆ ಹೆಚ್ಚಿನ ಪ್ರಮಾಣದ ದಂಡವನ್ನು ಮಹಾನಗರಪಾಲಿಕೆ ವತಿಯಿಂದ ವಸೂಲಿ ಮಾಡಲಾಗುತ್ತಿಲ್ಲ.
ಆ)	ಹಾಗಿದ್ದಲ್ಲಿ, ಹುಬ್ಬಳ್ಳಿ-ಧಾರವಾಡ ನಗರದಲ್ಲಿ ವಿಧಿಸುವ ಕರದ ಮೇಲಿನ ದಂಡವನ್ನು ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: (ವಿವರ ನೀಡುವುದು)?	ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ರ ಕಲಂ 112(3), 112(4) ಹಾಗೂ 112-ಅ ರನ್ವಯ ನಿಯಮಾವಳಿಯಂತೆ ಮಹಾನಗರ ಪಾಲಿಕೆ ವತಿಯಿಂದ ಆಸ್ತಿ ತೆರಿಗೆ ಹಾಗೂ ದಂಡವನ್ನು ನಿಯಮಾನುಸಾರ ವಸೂಲು ಮಾಡಲಾಗುತ್ತಿದೆ. ದಂಡವನ್ನು ಮನ್ನಾ ಮಾಡುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ:ನಅಇ 84 ಎಹೆಚ್‌ಡಿ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	538
ವಿಧಾನ ಸಭೆ ಸದಸ್ಯರ ಹೆಸರು	ಶ್ರೀ ಬಸವರಾಜ ಬೊಮ್ಮಾಯಿ
ಉತ್ತರಿಸಬೇಕಾದ ದಿನಾಂಕ	12.12.2018
ಉತ್ತರಿಸುವ ಸಚಿವರು	ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಮುಖ್ಯಮಂತ್ರಿ ಅನಿಲ ಭಾಗ್ಯಯೋಜನೆ ಯಾವಾಗ ಜಾರಿಗೆ ಬಂದಿರುತ್ತದೆ (ಯೋಜನೆಯ ವಿವರ ನೀಡುವುದು)	ಮುಖ್ಯಮಂತ್ರಿ ಅನಿಲಭಾಗ್ಯ ಯೋಜನೆ ದಿ:31–10–2018 ರಿಂದ ಜಾರಿಗೆ ಬಂದಿರುತ್ತದೆ. ದಿ:31–10–2017 ರ ಸರ್ಕಾರದ ಆದೇಶ ಸಂಖ್ಯೆ ಅನಾಸ 347 ಡಿಆರ್‌ಎ 2013 (ಭಾಗ–4) ಮತ್ತು ಮಾರ್ಗಸೂಚಿಗಳನ್ವಯ ಈ ಯೋಜನೆಯಲ್ಲಿ ಆಹಾರ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ ಮತ್ತು ಅರಣ್ಯ ಇಲಾಖೆಯಿಂದ ಅರ್ಹ ಫಲಾನುಭವಿಗಳಿಗೆ ಅನಿಲ ಸಂಪರ್ಕವನ್ನು ನೀಡಲಾಗುವುದು. ಪ್ರಾಥಮಿಕ ಹಂತದಲ್ಲಿ ಒಂದು ಲಕ್ಷ ಫಲಾನುಭವಿಗಳಿಗೆ ಅನಿಲ ಸಂಪರ್ಕವನ್ನು ನೀಡಲಾಗುತ್ತಿದೆ. ಈ ಯೊಜನೆಯಲ್ಲಿ ಅನಿಲ ಸಂಪರ್ಕ, ಸಿಲಿಂಡರ್ ಭಧ್ರತಾ ಠೇವಣಿ, ರೇಗ್ಯೂಲೇಟರ್ ಭಧ್ರತಾ ಠೇವಣಿ, ಸುರಕ್ಷಾ ಹೋಸ್ ಪೈಪ್, ಡಿ.ಜಿ.ಸಿ ಪುಸ್ತಕ, ತಪಾಸಣೆ ಮತ್ತು ಜೋಡಣಾ ವೆಚ್ಚ, ಎರಡು ಬರ್ನರ್ ಗ್ಯಾಸ್ ಸ್ಟವ್ ಮತ್ತು ಲೈಟರ್, ಎರಡು ಭರ್ತಿ ಸಿಲೆಂಡರ್ ಪರಿಕರಗಳನ್ನು ನೀಡಲಾಗುತ್ತದೆ.
ಆ	ಈ ಯೋಜನೆಯಡಿ ಈವರೆಗೆ ನೊಂದಣಿಯಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು : ಎಷ್ಟು ಜನ ಫಲಾನುಭವಿಗಳಿಗೆ ಯೋಜನೆಯ ಲಾಭ ದೊರೆಯುತ್ತಿದೆ; ಯೋಜನೆಗೆ ಅಗತ್ಯವಿರುವ ಹಣ ಎಷ್ಟು (ವಿವರ ನೀಡುವುದು)	ಈ ಯೋಜನೆಗೆ ಇದುವರೆಗೂ 3,24,153 ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗಿದೆ. ದಿ: 05–12–2018 ರ ವರೆಗೆ 30649 ಪಲಾನುಭವಿಗಳಿಗೆ ಉಚಿತ ಅನಿಲ ಸಂಪರ್ಕವನ್ನು ನೀಡಲಾಗಿದೆ. ಒಬ್ಬ ಪಲಾನುಭವಿಗಳಿಗೆ ಅನಿಲ ಸಂಪರ್ಕವನ್ನು ನೀಡಲು ರೂ. 4254.60 ಪೈಸೆಗಳ ವೆಚ್ಚ ಭರಿಸಲಾಗುತ್ತಿದ್ದು, ಒಂದು ಲಕ್ಷ ಫಲಾನುಭವಿಗಳಿಗೆ ಅಂದಾಜು ರೂ. 42,54,60,000/– ವೆಚ್ಚ ಭರಿಸಲಾಗುತ್ತಿದೆ.
ಇ	ಈ ಯೋಜನೆಯಡಿ ಫಲಾನುಭವಿಗಳಿಗೆ ನೀಡಲಾಗುವ ಗ್ಯಾಸ್ ಸ್ಟೌವ್ ಹಾಗೂ ಲೈಟರ್ ಖರೀದಿಗೆ ಟೆಂಡರ್ ಕರೆಯಲಾಗಿತ್ತೆ. ಟೆಂಡರ್‌ನಲ್ಲಿ ಎಷ್ಟು ಸಂಸ್ಥೆಗಳು ಭಾಗವಹಿಸಿದ್ದವು. ಈ ಸಂಸ್ಥೆಗಳು ನಮೂದಿಸಿದ್ದ ದರ ಎಷ್ಟು; ಯಾವ ಸಂಸ್ಥೆಗೆ ಟೆಂಡರ್ ನೀಡಲಾಗಿದೆ, ಟೆಂಡರ್ ನಿಯಮಗಳೇನು (ಸಂಪೂರ್ಣ ವಿವರ ನೀಡುವುದು).	MSIL ಸಂಸ್ಥೆಯು "ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆಯ" ಅಡಿಯಲ್ಲಿ ಯಾವುದೇ ಟೆಂಡರನ್ನು ಕರೆದಿರುವುದಿಲ್ಲ. ಆದರೆ ಅನಿಲ ಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಹಲವಾರು ಬಾರಿ ಸಭೆ ನಡೆಸಿರುತ್ತದೆ. ಯೋಜನೆಯ ಅನುಷ್ಠಾನ ಇನ್ನೂ ತೀರ್ಮಾನದ ಹಂತ ತಲುಪಿರದ ಕಾರಣವನ್ನು ಹಾಗೂ ಗ್ಯಾಸ್ ಸ್ಟೌವ್ ಮತ್ತು ಲೈಟರ್ ಖರೀದಿ ಪ್ರಕ್ರಿಯೆಯ ಸಮಯವನ್ನು ಗಮನದಲ್ಲಿಟ್ಟುಕೊಡು ನೋಡಿದಾಗ ಯೋಜನೆಯ ಅನುಷ್ಠಾನಕ್ಕೆ ಸಮಯದ ಅಭಾವವಾಗಬಹುದೆಂದು ಅರಿತು MSIL ಸಂಸ್ಥೆಯು ದಿನಾಂಕ 22.09.2017 ರಲ್ಲಿ ಡೆಕ್ಕನ್ ಹೆರಾಲ್ಡ್ ಮತ್ತು ಕನ್ನಡಪ್ರಭಾ ದಿನಪತ್ರಿಗಳಲ್ಲಿ ಗ್ಯಾಸ್ ಸ್ಟವ್ ಮತ್ತು ಲೈಟರ್‌ಗೆ ಸಂಬಂಧಿಸಿದಂತೆ "Expression of Interest"ಅನ್ನು ಪ್ರಕಟಿಸಿತು. "Expression of Interest" ಕರ್ನಾಟಕ ಸರ್ಕಾರದ ಇ–Procurement Portal –Ref.No. IPD/EOI/004/2017-18 dated 22.09.2017 ರಲ್ಲಿ ಮತ್ತು

https://eproc.karnataka.gov.in ಆನ್‌ಲೈನ್‌ನಲ್ಲಿ ಪ್ರಕಟವಾಗಿದೆ.

ಗ್ಯಾಸ್ ಸ್ಟೌವ್ ಮತ್ತು ಗ್ಯಾಸ್ ಲೈಟರ್ ಗಳನ್ನು KTPP ಕಾಯ್ದೆಯ 4(g) ಅಡಿಯಲ್ಲಿ ವಿನಾಯ್ತಿ ನೀಡಿ ಹೊರಡಿಸಲಾದ ಸರ್ಕಾರದ ಅಧಿಸೂಚನೆ ಸಂ. ಆಇ 1387 ವೆಚ್ಚ – 12 / 2017

ದಿ. 15.12.2017 ಮೇರೆಗೆ ಈಗಾಗಲೇ ಪ್ರಕಟಿಸಲಾಗಿದ್ದ Expression of Interest ಸಂಬಂಧ ಒಟ್ಟು 6 ಸಂಸ್ಥೆಗಳು ಪ್ರತಿಕ್ರಯಿಸಿದ್ದವು.

1. ಮೆ. ಗ್ರೀನ್‌ಚೆಫ್ ಅಪ್ಲೈಯನ್ಸಸ್ ಪ್ರೈವೇಟ್ ಲಿ., ಬೆಂಗಳೂರು
2. ಮೆ. ಸ್ಟೌವ್ ಕ್ರಾಫ್ಟ್ ಲಿ., ಬೆಂಗಳೂರು
3. ಮೆ. ಆರ್‌ಎಸ್ ಇಂಡಸ್ಟ್ರೀಸ್, ಹರಿಯಾಣ
4. ಮೆ. ಶೀನಾಗ್ ಅಲೈಡ್ ಎಂಟರ್ ಪ್ರೈಸಸ್ ಪ್ರೈವೇಟ್ ಲಿ., ಬೆಂಗಳೂರು
5. ಮೆ. ಕುಕ್ ಲೈನ್ ಇಂಡಸ್ಟ್ರೀಸ್ ಪ್ರೈ. ಲಿ., ಬೆಂಗಳೂರು
6. ಮೆ. ಸಿದ್ದಾರ್ಥ ಎಂಟರ್ ಪ್ರೈಸಸ್, ಬೆಂಗಳೂರು

ಕೇವಲ 4 ಸಂಸ್ಥೆಗಳು ಟೆಂಡರ್‌ಕೋಟ್ ಮಾಡಲು ಅರ್ಹತೆ ಹೊಂದಿದ್ದವು

1. ಮೆ. ಗ್ರೀನ್‌ಚೆಫ್ ಪ್ಲೈಯನ್ಸಸ್ ಪ್ರೈವೇಟ್ ಲಿ.
2. ಮೆ. ಸ್ಟೌವ್ ಕ್ರಾಪ್ಟ್ ಲಿ.
3. ಮೆ. ಆರ್‌ಎಸ್ ಇಂಡಸ್ಟ್ರೀಸ್
4. ಮೆ. ಶೀನಾಗ್ ಅಲೈಡ್‌ಎಂಟರ್ ಪ್ರೈಸಸ್ ಪ್ರೈವೇಟ್ ಲಿ.

ಈ–ಪೋರ್ಟಲ್ ಮೂಲಕ ಆರ್ಥಿಕ ಬಿಡ್ ಕರೆಯಲಾಗಿತ್ತು. ಕೋಟ್ ಮಾಡಿದ ದರ :

1. ಮೆ. ಗ್ರೀನ್‌ಚೆಫ್ ಅಪ್ಲಿಯನ್ಸಸ್ ಪ್ರೈವೇಟ್ ಲಿ. – ರೂ.997.10 (ತೆರಿಗೆ ಸೇರಿ) –ಎ2
2. ಮೆ. ಸ್ಟೌವ್‌ಕ್ರಾಪ್ಟ್ ಲಿ. – ರೂ.992.00 (ತೆರಿಗೆ ಸೇರಿ) –ಎ1

ಒಂದು ಗ್ಯಾಸ್ ಸ್ಟವ್ ಮತ್ತು ಲೈಟರ್ ನ ದರ		
ಂ	ಟೆಂಡರ್ ಕೋಟೆಡ್ ದರ (ಬೇಸಿಕ್)	840.68
ಃ	ಸಂಧಾನದ ದರ GST @ 18%	796.61 143.39
ಅ	MSIL ಖರೀದಿ ದರ	940.00
ಆ	MSIL ಮಾರ್ಜಿನ್ @ 5% (on B)	39.83
ಇ	ಸರಬರಾಜು ದರ GST @ 18%	836.44 150.56
ಒಟ್ಟು ಮೊತ್ತ		987.00

ದರ ಒಳಗೊಂಡಿದೆ :–ಗ್ಯಾಸ್ ಲೈಟರ್, Customised Box Packing ಮತ್ತು ಸರಬರಾಜು ವೆಚ್ಚ (ರಾಜ್ಯಾದ್ಯಂತ KSCFC ಗೋದಾಮುಗಳಿಗೆ).

ಈ ಕೆಳಗಿನ 2 ಸಂಸ್ಥೆಗಳಿಗೆ ಗ್ಯಾಸ್ ಸ್ಟೌವ್ ಮತ್ತು ಲೈಟರ್ ಗಳನ್ನು ಸರಬರಾಜು ಮಾಡಲು ಆದೇಶ ಮಾಡಲಾಗಿದೆ.

		1. ಮೆ. ಗ್ರೀನ್ ಚೆಫ್ ಅಪ್ಲೈಯನ್ಸಸ್ ಪ್ರೈವೇಟ್ ಲಿ. 2. ಮೆ. ಸ್ಟೌವ್ ಕ್ರಾಪ್ಟ್ ಲಿ. ಗ್ಯಾಸ್ ಸ್ಟೌವ್ ಮತ್ತು ಲೈಟರ್ ಒಂದಕ್ಕೆ, MSIL ಖರೀದಿಯ ದರ ರೂ.940/- (GST ಸೇರಿ) MSIL ಮಾರಾಟದ ದರ ರೂ.987/- (GST ಸೇರಿ). MSIL ಸಂಸ್ಥೆಯು ದಿ. 01.02.2018 ರಂದು ಮೆ. ಸ್ಟೌವ್‌ಕ್ರಾಪ್ಟ್ ಲಿ. ಸಂಸ್ಥೆಗೆ 80,000 ಮತ್ತು ಮೆ. ಗ್ರೀನ್‌ಚೆಫ್ ಅಪ್ಲೈಯನ್ಸಸ್ ಪ್ರೈವೇಟ್ ಲಿ. ಸಂಸ್ಥೆಗೆ 20,000 ಗ್ಯಾಸ್ ಸ್ಟೌವ್ ಮತ್ತು ಲೈಟರ್ ಗಳನ್ನು ಸರಬರಾಜು ಮಾಡಲು ಆದೇಶವನ್ನು ನೀಡಲಾಯಿತು.
ಈ	ಸ್ಟೌವ್ ಖರೀದಿಗೆ ಯಾವಾಗ ಆದೇಶ ನೀಡಲಾಗಿರುತ್ತದೆ. ಒಟ್ಟು ಎಷ್ಟು ಸ್ಟೌವ್ ಖರೀದಿಗೆ ಆದೇಶ ನೀಡಲಾಗಿತ್ತು.	ಕರ್ನಾಟಕ ಸರ್ಕಾರದ 4(g) ಅಧಿಸೂಚನೆ ಸಂ. ಆಇ 1387 ವೆಚ್ಚ – 12 / 2017 ದಿ. 15.12.2017 ಮತ್ತು ಸರ್ಕಾರದ ಪತ್ರ ಸಂಖ್ಯೆ: ಆನಾಸ: 361: ಡಿಆರ್‌ಎ : 2017 ದಿ. 31.01.2018 ರ ಆದೇಶದ ಅನ್ವಯ MSIL ಸಂಸ್ಥೆಯು Purchase Order No: 000100, 101 & 102 ದಿನಾಂಕ 01-02-2018ರ ಪ್ರಕಾರ ಒಟ್ಟು ಒಂದು ಲಕ್ಷ ಗ್ಯಾಸ್ ಸ್ಟೌವ್ ಮತ್ತು ಗ್ಯಾಸ್ ಲೈಟರ್ ಗಳಿಗೆ ಸರಬರಾಜು ಆದೇಶ ನೀಡಲಾಗಿದೆ.
ಉ	ಗ್ಯಾಸ್ ಸ್ಟೌವ್ ಹಾಗೂ ಲೈಟರ್ ಖರೀದಿಯಲ್ಲಿ ಅಕ್ರಮಗಳು ನಡೆದಿರುವ ಕುರಿತು ದೂರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಸರ್ಕಾರ ಈ ಕುರಿತು ತನಿಖೆಗೆ ಆದೇಶ ನೀಡಿದೆಯೇ, ತನಿಖೆ ಯಾವ ಹಂತದಲ್ಲಿದೆ (ವಿವರ ನೀಡುವುದು)?	ಇಲ್ಲ. ಈ ರೀತಿ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.

ಸಂಖ್ಯೆ: ಆನಾಸ 246 ಡಿಆರ್‌ಎ 2018

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ
ಮತ್ತು ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 905
02. ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)
03. ಉತ್ತರಿಸುವ ದಿನಾಂಕ : 12.12.2018
04. ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಮಾದಕ ವಸ್ತುಗಳ ಅವ್ಯವಹಾರವನ್ನು ತಡೆಗಟ್ಟುವ ದಿಶೆಯಲ್ಲಿ ಸರ್ಕಾರ ಕೈಗೊಂಡ ಕಠಿಣ ನಿರ್ಬಂಧಕ ಕ್ರಮಗಳು ಯಾವುವು;	ರಾಜ್ಯದಲ್ಲಿ ಮಾದಕ ದ್ರವ್ಯ ಬಳಕೆ ಮತ್ತು ಮಾರಾಟ ನಿಯಂತ್ರಿಸಲು ಮತ್ತು ಸಂಘಟಿತ ಗುಂಪು ಪತ್ತೆಮಾಡಲು ಇಲಾಖೆಯ ವತಿಯಿಂದ ಕೈಗೊಳ್ಳಲಾದ ಕ್ರಮಗಳ ವಿವರಗಳು ಈ ಕೆಳಕಂಡಂತಿವೆ: • ರಾಜ್ಯದ ಎಲ್ಲಾ ನಗರ / ಜಿಲ್ಲೆಗಳಲ್ಲಿ ಮಾದಕ ದ್ರವ್ಯ ಬಳಕೆ ಮತ್ತು ಮಾರಾಟ ಕುರಿತು ಅಪರಾಧ ಪ್ರಕರಣಗಳನ್ನು ವಿಶೇಷ ಗಮನ ನೀಡಿ ರಾಜ್ಯದಲ್ಲಿ ಸಿ.ಐ.ಡಿ ಘಟಕದಲ್ಲಿ ಹಾಗೂ ಕೇಂದ್ರ ಅಪರಾಧ ವಿಭಾಗ / ಸಿ.ಇ.ಎನ್ ಪೊಲೀಸ್ ಠಾಣೆಗಳಲ್ಲಿ ನಿರ್ವಹಿಸಲಾಗುತ್ತಿದೆ. • ದಿನಾಂಕ 26.06.2018ರಂದು ಎಲ್ಲಾ ಪೊಲೀಸ್ ಘಟಕಗಳಲ್ಲಿ ಅಂತರಾಷ್ಟ್ರೀಯ ಮಾದಕ ದ್ರವ್ಯ ಬಳಕೆ ಮತ್ತು ಮಾರಾಟ ವಿರೋಧಿ ದಿನವನ್ನು ಆಚರಿಸಲಾಯಿತು. • ಪೊಲೀಸ್ ಪ್ರಧಾನ ಕಛೇರಿಯಲ್ಲಿ ಇದರನ್ವಯ ತನಿಖಾಧಿಕಾರಿಗಳ ಅನುಕೂಲಕ್ಕಾಗಿ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಿ ಮಾದಕವಸ್ತು ಸರಬರಾಜು ತಡೆಯುವ ಬಗ್ಗೆ ಮತ್ತು ತನಿಖೆ ಮಾಡುವ ಬಗ್ಗೆ ವಿಶೇಷ ಮಾರ್ಗದರ್ಶನ ನೀಡಲಾಯಿತು. ಈ ಕಾರ್ಯಾಗಾರದಲ್ಲಿ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ, ಕೇಂದ್ರ ಗೃಹ ಮಂತ್ರಾಲಯರವರು ಪ್ರಕಟಿಸಿರುವ Drug Law Enforcement, Field Officers Handbook ರ ಕನ್ನಡ ಅನುವಾದವನ್ನು ಪ್ರಕಟಿಸಿ ತನಿಖಾಧಿಕಾರಿಗಳಿಗೆ ವಿತರಿಸಲಾಯಿತು. • ಪೊಲೀಸ್ ಪ್ರಧಾನ ಕಛೇರಿಯ ಸುತ್ತೋಲೆ ಸಂಖ್ಯೆ: ಅಪರಾಧ-6/43/ಎಸ್.ಎಂ.ಎಸ್/2018, ದಿನಾಂಕ 19.07.2018ರಲ್ಲಿ ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಗಳಲ್ಲಿ ಮಾದಕ ದ್ರವ್ಯ ಬಳಕ ಮತ್ತು ಮಾರಾಟ ತಡೆಗೆ ವಿಶೇಷ ಅಭಿಯಾನ ಕೈಗೊಳ್ಳಲು ಘಟಕಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದ್ದು, ಈ ಕುರಿತು ಎಲ್ಲಾ ಘಟಕಾಧಿಕಾರಿಗಳು ಅಗತ್ಯ ಕ್ರಮ ಕೈಗೊಂಡಿರುತ್ತಾರೆ. • ಸರ್ಕಾರದ ಆದೇಶ ಸಂಖ್ಯೆ: ಒಇ 16 ಪಿಎನ್‌ಡಿ 2018, ದಿನಾಂಕ 27.08.2018 ರಲ್ಲಿ ರಾಜ್ಯದಲ್ಲಿ ಮಾದಕ ವಸ್ತುಗಳ ಬಳಕೆಯನ್ನು ತಡೆಗಟ್ಟಲು ಶಾಲಾ-ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿ ರಚಿಸುವ ಕುರಿತು ಆದೇಶ ಹೊರಡಿಸಲಾಗಿದ್ದು, ಇದರನ್ವಯ ಘಟಕಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

		• ಎನ್.ಜಿ.ಓ ಮತ್ತು ಇತರ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಸಾರ್ವಜನಿಕ ಕಾರ್ಯಕ್ರಮ, ಮೆರವಣಿಗೆ, ದಿನಪತ್ರಿಕೆ, ವಾರಪತ್ರಿಕೆ ಎಲೆಕ್ಟ್ರಾನಿಕ್ ಮಾಧ್ಯಮಗಳಾದ ಫೇಸ್‌ಬುಕ್, ವಾಟ್ಸ್‌ಆಪ್, ಟ್ವಿಟರ್, ಇನ್ಸ್‌ಟಾಗ್ರಾಂ ಮೂಲಕ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆಗಳ ಸಹಯೋಗದೊಂದಿಗೆ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಅರಿವು ಮೂಡಿಸಲಾಗುತ್ತಿದೆ. • ಮಾದಕ ವಸ್ತುಗಳ ಬಳಕೆ ಮತ್ತು ಮಾರಾಟ ಕುರಿತು ಸಾರ್ವಜನಿಕರು ಗೌಪ್ಯವಾಗಿ ದೂರವಾಣಿ ಮೂಲಕ ದೂರು/ ಮಾಹಿತಿ ನೀಡಲು 04 ಅಂಕಿಗಳ ಶುಲ್ಕರಹಿತ ದೂರವಾಣಿ ಸಂಖ್ಯೆ: 1908 ನ್ನು ಪರಿಚಯಿಸಲಾಗಿದೆ. • ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 13 ಪಿಎಸ್‌ಡಿ 2017, ದಿನಾಂಕ: 16.05.2017 ರನ್ವಯ ಮಾದಕ ದ್ರವ್ಯ ಅಕ್ರಮ ಸಾಗಣೆ ತಡೆ ಕಾಯ್ದೆ 1988ರ (The Prevention of Illicit Traffic in NDPS act 1988) ಕಲಂ 3(1)ರನ್ವಯ ಮುಂಜಾಗ್ರತಾ ಕ್ರಮವಾಗಿ ಸಂಶಯಾಸ್ಪದ ವ್ಯಕ್ತಿಗಳನ್ನು ಬಂಧಿಸಲು ಅವಕಾಶ ಕಲ್ಪಿಸಲಾಗಿದೆ. • ತನಿಖಾಧಿಕಾರಿಗಳಿಗೆ ಕಾಲಕಾಲಕ್ಕೆ ತರಬೇತಿ ಸಂಸ್ಥೆಗಳಲ್ಲಿ ಅಗತ್ಯ ತರಬೇತಿ ನೀಡಲಾಗುತ್ತಿದೆ. • ಸುಧಾರಿತ ಬೀಟ್ ವ್ಯವಸ್ಥೆಯಡಿಯಲ್ಲಿ ಪ್ರತೀ ಬೀಟ್ ಸಿಬ್ಬಂದಿಗಳು ಮಾದಕ ದ್ರವ್ಯ ಮಾರಾಟ ಮತ್ತು ಬಳಕೆ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತಿದೆ. • ಡ್ರಗ್ಸ್ ಮಾಫಿಯಾವನ್ನು ತಡೆಗಟ್ಟಲು ವಿಶೇಷ ತಂಡಗಳನ್ನು ರಚಿಸಿ ಪರಿಶೀಲಿಸಲಾಗುತ್ತಿದೆ. • ಮಾದಕ ವಸ್ತುಗಳ ಮಾರಾಟ ಜಾಲ ನಡೆಯುತ್ತಿರುವ ಬಗ್ಗೆ ಮಾಹಿತಿ ದೊರೆತಲ್ಲಿ ಕೂಡಲೇ ಕಾರ್ಯಪ್ರವೃತ್ತರಾಗಿ ದಾಳಿ ನಡೆಸಿ, ಆರೋಪಿತರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. • ಮಾದಕ ವಸ್ತುಗಳ ಸಾಗಾಟ ಹಾಗೂ ಮಾರಾಟದ ಬಗ್ಗೆ ನಿಗಾ ಇಡಲು ಬಾತ್ಮೀದಾರರನ್ನು ನೇಮಿಸಲಾಗಿದ್ದು, ಪೊಲೀಸರೂ ಸಹ ಸಾದಾ ಉಡುಪಿನಲ್ಲಿ ಸತತವಾಗಿ ಮಾಹಿತಿ ಕಲೆಹಾಕುತ್ತಿದ್ದಾರೆ. • ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಜನಜಾಗೃತಿ ಸಭೆ, ಶಾಲಾ ಕಾಲೇಜುಗಳಲ್ಲಿ ಜಾಗೃತಿ ಶಿಬಿರ, ಹಾಗೂ ಜಾಥಗಳನ್ನು ನಡೆಸಲಾಗುತ್ತಿದೆ.
ಆ)	ರಾಜ್ಯಾದ್ಯಂತ ಪೊಲೀಸ್ ಇಲಾಖೆಯವರು ಈ ಕುರಿತು ಜರುಗಿಸಿದ ವಿಶೇಷ ಕಾರ್ಯಾಚರಣೆಯ ವರದಿ ಮತ್ತು ಅಂಕಿ ಅಂಶಗಳೇನು (ವಿವರ ನೀಡುವುದು);	ಮಾದಕ ವಸ್ತುಗಳ ಬಳಕೆ ಮತ್ತು ಸೇವನೆ ನಿರ್ಬಂಧಿಸಲು ಆಗಸ್ಟ್ ಮತ್ತು ಸೆಪ್ಟೆಂಬರ್ 2019 ರಲ್ಲಿ ವಿಶೇಷ ಜಾಗೃತಿ ಅಭಿಯಾನ ಕೈಗೊಳ್ಳಲಾಗಿದ್ದು, ಆಗಸ್ಟ್ ಮಾಹೆಯಲ್ಲಿ 170 ಪ್ರಕರಣಗಳನ್ನು ಹಾಗೂ ಸೆಪ್ಟೆಂಬರ್ ಮಾಹೆಯಲ್ಲಿ 109 ಪ್ರಕರಣಗಳು ಹೀಗೆ ಒಟ್ಟು 279 ಪ್ರಕರಣಗಳು ದಾಖಲಾಗಿರುತ್ತದೆ.

ಇ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಮಾದಕ ವಸ್ತುಗಳ ವಹಿವಾಟು ಹೆಚ್ಚಿನ ಪ್ರಮಾಣದಲ್ಲಿದೆ: ವಿಶೇಷ ಕಾರ್ಯಾಚರಣೆಯಲ್ಲಿ ದಾಖಲಿಸಲಾದ ಪ್ರಕರಣಗಳ ಜಿಲ್ಲಾವಾರು ಸಂಖ್ಯೆ ಎಷ್ಟು; ಹೊರ ರಾಜ್ಯಗಳಿಂದ ರಾಜ್ಯಕ್ಕೆ ಬರುತ್ತಿದೆ ಎನ್ನಲಾಗುವ ಮಾದಕ ವಸ್ತುಗಳ ನಿರ್ಬಂಧಕ್ಕಾಗಿ ಹಾಗೂ ಅಕ್ರಮ ವ್ಯವಹಾರಗಳನ್ನು ತಡೆಗಟ್ಟಲು ಕೈಗೊಂಡ ಕಟ್ಟುನಿಟ್ಟಿನ ಕ್ರಮಗಳೇನು?

ಕಳೆದ 05 ವರ್ಷಗಳಲ್ಲಿ ಎನ್.ಡಿ.ಪಿ.ಎಸ್ ಕಾಯ್ದೆ 1985 ರನ್ವಯ ವರದಿಯಾದ ಅಪರಾಧ ಪ್ರಕರಣಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿರುವ. ರಾಜ್ಯದ ಕೆಳಕಂಡ ಜಿಲ್ಲೆಗಳಲ್ಲಿ ಮಾದಕ ವಸ್ತುಗಳ ವಹಿವಾಟು ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗುತ್ತಿವೆ.

1. ಬೆಂಗಳೂರು ನಗರ
2. ಮಂಗಳೂರು ನಗರ
3. ಉಡುಪಿ ಜಿಲ್ಲೆ
4. ಬೆಳಗಾವಿ ಜಿಲ್ಲೆ
5. ಶಿವಮೊಗ್ಗ ಜಿಲ್ಲೆ
6. ಚಾಮರಾಜನಗರ ಜಿಲ್ಲೆ (ಅನಧಿಕೃತವಾಗಿ ಗಾಂಜಾ ಬೆಳೆಯುವ ವಿರುದ್ಧ)

ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ಕೈಗೊಳ್ಳಲಾದ ವಿಶೇಷ ಕಾರ್ಯಾಚರಣೆಯ ಸಂದರ್ಭದಲ್ಲಿ ಎನ್.ಡಿ.ಪಿ.ಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

ಘಟಕ	ಆಗಸ್ಟ್	ಸೆಪ್ಟೆಂಬರ್	ಒಟ್ಟು
ಬೆಂಗಳೂರು ನಗರ	62	42	104
ಮೈಸೂರು ನಗರ	2	1	3
ಹುಬ್ಬಳ್ಳಿ-ಧಾರವಾಡ ನಗರ	2	3	5
ಮಂಗಳೂರು ನಗರ	24	17	41
ಬೆಳಗಾವಿ ನಗರ	4	3	7
ಬೆಂಗಳೂರು	5	0	5
ತುಮಕೂರು	1	0	1
ಕೋಲಾರ	2	1	3
ಕೆ.ಜಿ.ಎಫ್	0	0	0
ರಾಮನಗರ	0	2	2
ಚಿಕ್ಕಬಳ್ಳಾಪುರ	0	1	1
ಮೈಸೂರು	0	0	0
ಹಾಸನ	3	1	4
ಚಾಮರಾಜನಗರ	1	3	4
ಕೊಡಗು	3	2	5
ಮಂಡ್ಯ	0	0	0
ದಾವಣಗೆರೆ	1	0	1
ಹಾವೇರಿ	1	2	3
ಶಿವಮೊಗ್ಗ	3	4	7
ಚಿತ್ರದುರ್ಗ	0	1	1
ದಕ್ಷಿಣ ಕನ್ನಡ	3	0	3
ಉತ್ತರ ಕನ್ನಡ	3	2	5
ಚಿಕ್ಕಮಗಳೂರು	0	0	0
ಉಡುಪಿ	40	15	55
ಬೆಳಗಾವಿ	3	2	5
ಗದಗ್	0	1	1
ವಿಜಯಾಪುರ	1	3	4
ಧಾರವಾಡ	0	0	0
ಬಾಗಲಕೋಟೆ	1	1	2
ಕಲ್ಬುರ್ಗಿ	0	0	0
ಬೀದರ್	2	2	4

ಯಾದಗಿರಿ	0	0	0
ಬಳ್ಳಾರಿ	1	0	1
ರಾಯಚೂರು	1	0	1
ಕೊಪ್ಪಳ	1	0	1
ಒಟ್ಟು	**170**	**109**	279

ಹೊರ ರಾಜ್ಯಗಳಿಂದ ರಾಜ್ಯಕ್ಕೆ ಬರುತ್ತಿದೆ ಎನ್ನಲಾಗುವ ಮಾದಕ ವಸ್ತುಗಳ ನಿರ್ಬಂಧಕ್ಕಾಗಿ ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ:

- ಸಮುದ್ರ ಮಾರ್ಗದಿಂದ ಹೊರ ರಾಜ್ಯ/ ರಾಷ್ಟ್ರಗಳಿಂದ ರಾಜ್ಯಕ್ಕೆ ಬರಬಹುದಾದ ಮಾದಕ ವಸ್ತುಗಳನ್ನು ನಿರ್ಬಂಧಿಸಲು ಕರಾವಳಿ ಕಾವಲು ಪೊಲೀಸ್ ಠಾಣೆಗಳು ನಿಗಾವಹಿಸುತ್ತಿವೆ.
- ಗಡಿ ಭಾಗದ ಪೊಲೀಸ್ ಠಾಣೆಗಳಲ್ಲಿ ಚೆಕ್‌ಪೋಸ್ಟ್ ಗಳನ್ನು ಸ್ಥಾಪಿಸಿ ಮಾದಕ ವಸ್ತುಗಳ ಸಾಗಣೆಯ ಮೇಲೆ ಕಣ್ಗಾವಲಿರಿಸಲಾಗಿದೆ ಹಾಗೂ ಅಂತರರಾಜ್ಯ ಗಡಿಜಿಲ್ಲೆಗಳ ಸಭೆಗಳನ್ನು ನಡೆಸಿ ಮಾಹಿತಿ ಸಂಗ್ರಹಿಸಿ ಮಾದಕ ದ್ರವ್ಯ ಬಳಕೆ ಮತ್ತು ಮಾರಾಟ ನಿರ್ಬಂಧಿಸಲಾಗಿದೆ.
- ಕೇಂದ್ರ ರೈಲ್ವೆ ಪ್ರೊಟೆಕ್ಷನ್ ಫೋರ್ಸ್ ಸಹಯೋಗದೊಂದಿಗೆ ರಾಜ್ಯ ರೈಲ್ವೆ ಪೊಲೀಸ್ ವತಿಯಿಂದ ರೈಲು ಮಾರ್ಗದಲ್ಲಿ ಸಾಗಣೆಯಾಗುವ ಮಾದಕ ವಸ್ತಗಳ ಸಾಗಣೆಯನ್ನು ಪತ್ತೆಮಾಡಲಾಗುತ್ತಿದೆ.
- ವಾಯುಮಾರ್ಗದಲ್ಲಿ ಮಾದಕ ದ್ರವ್ಯ ಮಾರಾಟ ಮತ್ತು ಸಾಗಣೆಯನ್ನು ಬ್ಯೂರೋ ಆಫ್ ಇಮಿಗ್ರೇಷನ್ ಮತ್ತು ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ರವರು ಕಣ್ಗಾವಲಿರಿಸಿದ್ದು. ಇತರ ರಾಜ್ಯಗಳ ಕ್ರಿಮಿನಲ್ ಗೆಜೆಟ್‌ನಲ್ಲಿ ಪ್ರಕಟಿಸಲಾಗುವ ಮಾದಕ ದ್ರವ್ಯಗಳ ಸಾಗಣೆ ಮಾಡುವ ರೂಢಿಗತ ಅಪರಾಧಿಗಳ ಚಲನ ವಲನಗಳ ಮೇಲೆ ನಿಗಾ ಇಡಲಾಗಿದೆ.

ಒಇ 23 ಪಿಎನ್‌ಡಿ 2018

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 870
ಸದಸ್ಯರ ಹೆಸರು : ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)
ಉತ್ತರಿಸಬೇಕಾದ ದಿನಾಂಕ : 12.12.2018
ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಬೆಂಗಳೂರಿನ ಬೆಳ್ಳಂದೂರು ಕೆರೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಸಿರು ನ್ಯಾಯಾಪೀಠ ಮತ್ತು ರಾಜ್ಯ ಉಚ್ಚ ನ್ಯಾಯಾಲಯ ನೀಡಿರುವ ಸೂಚನೆಗಳು ಯಾವುವು;	ಬೆಳ್ಳಂದೂರು ಕೆರೆಯ ಮುನಶ್ಚೇತನಕ್ಕೆ ಸಂಬಂಧಿಸಿದಂತೆ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಪೀಠವು ಮೂಲ ದಾವೆ ಸಂ. 125/2017 ಮತ್ತು 217/2017 ರಲ್ಲಿ ದಿನಾಂಕ 19.04.2017, 18.05.2017, 29.01.2018 ಮತ್ತು 06.12.2018 ರಂದು ನೀಡಿರುವ ಆದೇಶಗಳಲ್ಲಿ ಹಲವು ಸೂಚನೆಗಳನ್ನು ನೀಡಿದ್ದು, ಮಾನ್ಯ ನ್ಯಾಯಮಂಡಳಿಯು ನೀಡಿರುವ ಆದೇಶಗಳ ಪ್ರತಿಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂ. 58668/2015 ರಲ್ಲಿ ದಿನಾಂಕ: 17.08.2016, 09.01.2017 ಮತ್ತು 13.07.2018 ರಂದು ನೀಡಿರುವ ಆದೇಶಗಳಲ್ಲಿ ಹಲವು ಸೂಚನೆಗಳನ್ನು ನೀಡಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರತಿಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.
ಆ)	ನ್ಯಾಯಾಲಯ ನೀಡಿರುವ ಎಲ್ಲಾ ಸೂಚನೆಗಳನ್ನು ಸರ್ಕಾರ ಪಾಲಿಸಿದೆಯೇ, ನ್ಯಾಯಾಲಯದ ಸೂಚನೆ ಅನ್ವಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಹೌದು. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯು ನೀಡಿರುವ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವ ಕುರಿತು ಸಂಬಂಧಿತ ಸಂಸ್ಥೆ / ಮಂಡಳಿ / ಪ್ರಾಧಿಕಾರಗಳು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ. **ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ** 1. ಕೆರೆಯ ಪ್ರದೇಶದಲ್ಲಿನ ಅಂಬೇಡ್ಕರ್ ನಗರ ಪ್ರದೇಶವನ್ನು ಹೊರತುಪಡಿಸಿ ಎಲ್ಲಾ ಅನಧಿಕೃತ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ ಮತ್ತು ಫೆನ್ಸಿಂಗ್ ಅಳವಡಿಸಲಾಗಿದೆ. 2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಳ್ಳಂದೂರು ಕೆರೆಯ ನೋಡಲ್ ಸಂಸ್ಥೆಯಾಗಿದ್ದು, ಕೆರೆಯ ಸಂರಕ್ಷಣೆಗೆ ಸಂಬಂಧಿಸಿದಂತೆ, ಅಲ್ಪಾವಧಿ ಕಾಮಗಾರಿಗಳಾದ ಕೆರೆಯ ಒತ್ತುವರಿಯನ್ನು ತೆಗೆದು ಡಾ॥ ಬಿ.ಆರ್.ಅಂಬೇಡ್ಕರ್ ನಗರ ಸ್ಲಂ ಮತ್ತು ಡಿಫೆನ್ಸ್ ಲ್ಯಾಂಡ್ ಹೊರತುಪಡಿಸಿ, ಕೆರೆಯ ಸುತ್ತಲೂ ತಂತಿಬೇಲಿ ನಿರ್ಮಿಸಿದೆ. ಕಲುಷಿತ ನೀರಿನಿಂದ ಉಂಟಾದ ನೊರೆಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಹರಡದಂತೆ ತಡೆಯಲು ಎತ್ತರವಾದ Wire Net Mesh ಅಳವಡಿಸಿದೆ. ಕಲುಷಿತ ನೀರಿನಿಂದ ಉಂಟಾಗುವ ನೊರೆಯ ಸಾಂದ್ರತೆಯನ್ನು ತಗ್ಗಿಸಲು ಕೆರೆಯ ಕೋಡಿ ಹತ್ತಿರ Water Sprinklers ಅಳವಡಿಸಿದೆ. ಕೆರೆಯಲ್ಲಿ 31,257 ಮೆಟ್ರಿಕ್ ಟನ್ ಕಳೆಯನ್ನು ತೆಗೆಯಲಾಗಿದೆ. 3. ಬೆಳ್ಳಂದೂರು ಮತ್ತು ವರ್ತೂರು ಕೆರೆಗಳಿಗೆ ದೀರ್ಘಾವಧಿ ಕಾಮಗಾರಿಗಳಾದ Flood Control Works ಅಂದರೆ, Sluice with gates, Waste Weir & Retaining Walls ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ** 1. ಮಂಡಳಿಯು ಬೆಳ್ಳಂದೂರು ಕೆರೆ ಜಲಾನಯನ ಪ್ರದೇಶದಲ್ಲಿರುವ ಕೈಗಾರಿಕಾ ತ್ಯಾಜ್ಯ ನೀರು ಉತ್ಪತ್ತಿಯಾಗುವ (Water based industries) 116 ಉದ್ದಿಮೆಗಳಿಗೆ ಮುಚ್ಚುವ ಆಜ್ಞೆಯನ್ನು ನೀಡಿರುತ್ತದೆ. ಈ ಸಂಬಂಧದಲ್ಲಿ ಸದರಿ

ಘಟಕಗಳ ವಿದ್ಯುಚ್ಛಕ್ತಿ ಸಂಪರ್ಕವನ್ನು BESCOM ರವರು ಕಡಿತಗೊಳಿಸಿರುತ್ತಾರೆ.

2. ಮಂಡಳಿಯಿಂದ ಘನ ತ್ಯಾಜ್ಯ ನಿರ್ವಹಣೆಯನ್ನು ಪರಿಸರ ಸಂರಕ್ಷಣೆ ಕಾಯ್ದೆಯ Construction and Demolition Waste Management Rules, 2016 ಅನ್ವಯ ಕ್ರಮ ಕೈಗೊಳ್ಳುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನಗರಾಭಿವೃದ್ಧಿ ಇಲಾಖೆ, ಲೋಕೋಪಯೋಗಿ ಇಲಾಖೆಗಳನ್ನು ಕೋರಲಾಗಿರುತ್ತದೆ.

3. ಬೆಂಗಳೂರು ನಗರದಲ್ಲಿ ಖಾಸಗಿ ವಲಯದಲ್ಲಿ ಸ್ಥಾಪಿಸಲಾಗಿರುವ, ನಿಗಧಿತ ಸಾಮರ್ಥ್ಯಕ್ಕಿಂತ ಕಡಿಮೆ ಬಳಕೆಯಾಗುತ್ತಿರುವ ರೊಚ್ಚು ನೀರು ಸಂಸ್ಕರಣಾ ಘಟಕಗಳ ಹೆಚ್ಚುವರಿ ಸಾಮರ್ಥ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ವತಿಯಿಂದ ಅಧಿಸೂಚನೆ ಹೊರಡಿಸಲು ಮಂಡಳಿಯು ಕೋರಿದ್ದು, ತದನಂತರ ದಿನಾಂಕ: 15.05.2017 ರಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ಅಧಿಸೂಚನೆಯನ್ನು ಹೊರಡಿಸಿದೆ. ಸದರಿ ಅಧಿಸೂಚನೆಯಲ್ಲಿ 63 MLD ಯಷ್ಟು ಹೆಚ್ಚುವರಿ ರೊಚ್ಚು ನೀರು ಸಂಸ್ಕರಣಾ ಸಾಮರ್ಥ್ಯವಿದ್ದು, ಬೆಳ್ಳಂದೂರು ಜಲಾನಯನ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ವಾಣಿಜ್ಯ ಮತ್ತು ವಸತಿ ಸಮುಚ್ಚಯಗಳಿಂದ ಉತ್ಪತ್ತಿಯಾಗುವ ರೊಚ್ಚು ನೀರನ್ನು ಈ ಘಟಕಗಳಿಗೆ ಸಾಗಿಸಿ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡುವಂತೆ ನಿರ್ದೇಶಿಸಲಾಗಿದೆ ಹಾಗೂ ಈ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದೆ.

4. ಮಂಡಳಿಯ ಪರಿವೀಕ್ಷಣೆ ಪ್ರಕಾರ ಸದರಿ ಜಲಾನಯನ ಪ್ರದೇಶದಲ್ಲಿ ಯಾವುದೇ surfactant or polymer chemical industries ಇರುವುದಿಲ್ಲ. ಅದನ್ನು ಮಾನ್ಯ ನ್ಯಾಯಮಂಡಳಿಯ ಗಮನಕ್ಕೆ ತರಲಾಗಿದೆ.

<u>ಬೆಂಗಳೂರು ಜಲಮಂಡಳಿಯ ವತಿಯಿಂದ</u>

ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯಲ್ಲಿರುವ ಹಳೆಯ 163 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ದ್ವಿತೀಯ ಹಂತದ ಶುದ್ಧೀಕರಣದ ಘಟಕವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಇತ್ತೀಚಿಗೆ ನಿಗದಿಪಡಿಸಿರುವ ತ್ಯಾಜ್ಯನೀರಿನ ಅಂಶಗಳನ್ನು ಪರಿಷ್ಕೃತ ಪರಿಮಿತಿಯಲ್ಲಿ ತರಲು ಅವಶ್ಯವಿರುವ ಉನ್ನತೀಕರಣ ಕಾಮಗಾರಿಗಳನ್ನು ಮಂಡಳಿಯು ಕೈಗೊಳ್ಳುವುದು. ಬೆಳ್ಳಂದೂರು ಕೆರೆಗೆ ತ್ಯಾಜ್ಯನೀರು ನೇರವಾಗಿ ಹರಿಯುವುದನ್ನು ತಪ್ಪಿಸಲು ಜಲಮಂಡಳಿಯು ಮೆಗಾಸಿಟಿ ರಿವಾಲ್ವಿಂಗ್ ನಿಧಿಯಡಿಯಲ್ಲಿ ಕೋರಮಂಗಲ ಮತ್ತು ಚಲ್ಲಘಟ್ಟ ಮುಖ್ಯ ಕಣಿವೆಯಲ್ಲಿ 150 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯನೀರು ಶುದ್ಧೀಕರಣ ಘಟಕದ ಕಾಮಗಾರಿಯನ್ನು ಕೈಗೊಂಡಿದೆ. ಈಗ ಈ ಕಾಮಗಾರಿ ಪ್ರಗತಿಯಲ್ಲಿದ್ದು 2020ರ ಅಂತ್ಯದಲ್ಲಿ ಘಟಕವನ್ನು ಕಾರ್ಯಚಾಲನೆ ಮಾಡಲು ಯೋಜಿಸಲಾಗಿದೆ.

ಇದರ ಜೊತೆ ಕೇಂದ್ರ ಸರ್ಕಾರದ ಅಮೃತ್ ಯೋಜನೆಯಡಿಯಲ್ಲಿ ಬೆಳ್ಳಂದೂರು ಕೆರೆಯ ಮೇಲ್ಭಾಗ ಪ್ರದೇಶಗಳಲ್ಲಿ ಬರುವ ಸಾರಕ್ಕಿ, ಹುಳಿಮಾವು, ಅಗರಂ ಕೆರೆ ಹಾಗೂ ಚಿಕ್ಕ ಬೇಗೂರು ಕೆರೆಗಳ ಪಕ್ಕದಲ್ಲಿ ಒಟ್ಟು 55 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ನಾಲ್ಕು ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಿಸಲಾಗುತ್ತಿದೆ. ಈ ಘಟಕಗಳನ್ನು 2019ರ ಅಂತ್ಯಭಾಗದಲ್ಲಿ ಕಾರ್ಯ ಪೂರ್ಣಮಾಡಲು ಯೋಜಿಸಲಾಗಿದೆ. ಕೋರಮಂಗಲ ಕ್ರೀಡಾ ಸಂಕೀರ್ಣದ ಬಳಿ 210 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಒಂದು ತ್ಯಾಜ್ಯನೀರಿನ ರೇಚಕ ಸ್ಥಾವರ ಹಾಗೂ ಈ ಸ್ಥಾವರದಿಂದ ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯ ತ್ಯಾಜ್ಯನೀರು ಶುದ್ಧೀಕರಣ ಘಟಕದವರೆಗೂ ತ್ಯಾಜ್ಯನೀರನ್ನು ಪಂಪ್ ಮಾಡಲು ರೈಸಿಂಗ್ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಗಳನ್ನು ಸಹ ಮಂಡಳಿ ಕೈಗೊಂಡಿದೆ. ಈ ಎರಡು ಕಾಮಗಾರಿಗಳನ್ನು 2020ರ ಮಧ್ಯಭಾಗದಲ್ಲಿ ಪೂರ್ಣಮಾಡಲಾಗುತ್ತದೆ.

		<u>**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ**</u> ಬೆಳ್ಳಂದೂರು ಕೆರೆಗೆ ಘನ ತ್ಯಾಜ್ಯವನ್ನು ತಂದು ಎಸೆಯುತ್ತಿದ್ದ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ 5 ಮುಖ್ಯ ಸ್ಥಳಗಳಲ್ಲಿ ಸಿಸಿಟಿವಿಗಳನ್ನು ಅಳವಡಿಸಲಾಗಿದ್ದು, ಸದರಿ ಸಿಸಿಟಿವಿಗಳ ನಿರ್ವಹಣೆಯನ್ನು ವಾರ್ಡ್ ಹಂತದಲ್ಲಿ ಸಹಾಯಕ ಅಭಿಯಂತರರು ಹಾಗೂ ಆರೋಗ್ಯ ಪರಿವೀಕ್ಷಕರ ಮೇಲ್ವಿಚಾರಣೆಯಲ್ಲಿ ನಿರ್ವಹಿಸಲಾಗುತ್ತಿದೆ. ಇನ್ನು 40 ಸಿಸಿಟಿವಿಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಮುಂದಿನ 30 ದಿನಗಳೊಳಗಾಗಿ ಸಿಸಿಟಿವಿ ಅಳವಡಿಕೆ ಕಾರ್ಯ ಮುಕ್ತಾಯಗೊಳ್ಳುತ್ತದೆ. ಬೆಳ್ಳಂದೂರು ಕೆರೆಯಲ್ಲಿ ತುಂಬಿದ್ದ 100 ರಿಂದ 110 ಕ್ಯೂಬಿಕ್ ಮೆಟ್ರಿಕ್ ಟನ್‌ಗಳಷ್ಟು ಘನ ತ್ಯಾಜ್ಯವನ್ನು ಕೆರೆಯ ವಿವಿದ ಜಾಗಗಳಲ್ಲಿ ಹಾಕಲಾಗಿದ್ದುದ್ದನ್ನು ಮಾರ್ಚ್ ರಿಂದ ಏಪ್ರಿಲ್ 2017 ರಲ್ಲಿ ತೆರವುಗೊಳಿಸಲಾಗಿರುತ್ತದೆ. ಈ ಕಾರ್ಯಕ್ಕಾಗಿ ವಾರ್ಡ್ ಹಂತದಲ್ಲಿ ಘನ ತ್ಯಾಜ್ಯವನ್ನು ತಡೆಗಟ್ಟಲು ಮಾರ್ಷಲ್‌ಗಳನ್ನು ನೇಮಕ ಮಾಡಲಾಗಿದ್ದು, ಮಾರ್ಷಲ್‌ಗಳು ಸದಾ ಗಸ್ತಿನಲ್ಲಿದ್ದು, ಘನ ತ್ಯಾಜ್ಯ ಎಸೆಯುವುದನ್ನು ನಿಯಂತ್ರಿಸಲಾಗುತ್ತಿದೆ.
		ಕೆರೆಯ ಅಂಗಳದಲ್ಲಿ ಘನ ತ್ಯಾಜ್ಯವನ್ನು ಎಸೆಯಲಾಗುತ್ತಿದ್ದ ಸ್ಥಳಗಳಲ್ಲಿ ರೂ.5.00 ಲಕ್ಷಗಳವರೆಗೆ ದಂಡ ವಿಧಸಲಾಗುವುದೆಂಬ ಬೋರ್ಡ್‌ಗಳನ್ನು 20 ವಿವಿಧ ಸ್ಥಳಗಳಲ್ಲಿ ಅಳವಡಿಸಲಾಗಿರುತ್ತದೆ. ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸ್ಥಳಗಳಿಗೆ ದಿನಾಂಕ 05.05.2017 ರಿಂದ 30.03.2018 ರವರೆಗೆ ಹೋಂ ಗಾರ್ಡ್‌ಗಳನ್ನು ನಿಯೋಜಿಸಲಾಗಿದ್ದು, ದಿನಾಂಕ 01.03.2018 ರಿಂದ ಒಬ್ಬರು ಮುಖ್ಯ ಮಾರ್ಷಲ್ ಹಾಗೂ 18 ಮಾರ್ಷಲ್‌ಗಳನ್ನು ಸಹ ನಿಯೋಜನೆ ಮಾಡಲಾಗಿರುತ್ತದೆ. ನಾಲ್ಕು ವಿವಿಧ ಸ್ಥಳಗಳಲ್ಲಿ ವಾಚ್ ಟವರ್‌ಗಳನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಕೆರೆಯ ಅಂಗಳದಲ್ಲಿ "ಸಿ" ಮತ್ತು "ಡಿ" ದರ್ಜೆಯ ತ್ಯಾಜ್ಯಗಳನ್ನು ರಾತ್ರಿ ಸಮಯದಲ್ಲಿ ತಂದು ಸುರಿಯುತ್ತಿದ್ದ ಟ್ರ್ಯಾಕ್ಟರ್ ಮತ್ತು ಲಾರಿಗಳನ್ನು ವಶಕ್ಕೆ ಪಡೆದು, ಈ ಸಂಬಂಧ ಬಿಡಿಎಗೆ ಮುಂದಿನ ಕ್ರಮಕ್ಕಾಗಿ ವರದಿ ನೀಡಲಾಗಿರುತ್ತದೆ.
ಇ)	ಕೆರೆಯ ಕಲುಷಿತಗೊಳ್ಳಲು ಪ್ರಮುಖ ಕಾರಣಗಳೇನು; ಕೆರೆಯ ವ್ಯಾಪ್ತಿಯಲ್ಲಿ ಒಟ್ಟು ಎಷ್ಟಯ ಕೈಗಾರಿಕೆಗಳು ಹಾಗೂ ಬೃಹತ್ ವಸತಿ ಮತ್ತು ವಾಣಿಜ್ಯ ಸಮುಚ್ಚಯಗಳಿವೆ; ನ್ಯಾಯಾಲಯದ ಆದೇಶದ ನಂತರ ಎಷ್ಟು ಕೈಗಾರಿಕೆಗಳನ್ನು ಮುಚ್ಚಲಾಗಿದೆ; (ವಿವರ ನೀಡುವುದು)	ಬೆಳ್ಳಂದೂರು ಕೆರೆಯ ಜಲಾನಯನ ಪ್ರದೇಶ (Catchment Area) ದಿಂದ ಹರಿದು ಬರುತ್ತಿರುವ ಸಂಸ್ಕರಣೆಗೊಳ್ಳದ ಚರಂಡಿ ಮತ್ತು ಒಳಚರಂಡಿ ತ್ಯಾಜ್ಯ ನೀರು ಮತ್ತು ಕೆರೆಗೆ ಈ ಹಿಂದೆ ತುಂಬಲಾಗಿದ್ದ ಕಸ, ಘನತ್ಯಾಜ್ಯ ಹಾಗೂ ಅ & ಆ Waste ನಿಂದಾಗಿ ಕೆರೆಯು ಕಲುಷಿತಗೊಂಡಿರುತ್ತದೆ. ಬೆಳ್ಳಂದೂರು ಕೆರೆಯ ವ್ಯಾಪ್ತಿಯಲ್ಲಿ ಒಟ್ಟು 490 ಸಮ್ಮತಿ ಪತ್ರದೊಂದಿಗೆ ಕಾರ್ಯನಿರ್ವಹಿಸುವ ಕೈಗಾರಿಕೆಗಳು ಮತ್ತು 38 ಅನಧಿಕೃತ ಕೈಗಾರಿಕೆಗಳು ಹಾಗೂ ಸುಮಾರು 873 ಬೃಹತ್ ವಸತಿ ಮತ್ತು ವಾಣಿಜ್ಯ ಸಮುಚ್ಚಯಗಳಿವೆ. ಮಾನ್ಯ ನ್ಯಾಯಮಂಡಳಿಯ ಆದೇಶದ ನಂತರ 116 ಉದ್ದಿಮೆಗಳಿಗೆ ಮಂಡಳಿಯ ವತಿಯಿಂದ ಮುಚ್ಚುವ ಆದೇಶವನ್ನು ನೀಡಲಾಗಿದೆ.
ಈ)	ಹಸಿರು ನ್ಯಾಯ ಪೀಠ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸುವ ಎಚ್ಚರಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಕಾರಣಗಳೇನು;	ರಾಷ್ಟ್ರೀಯ ಹಸಿರು ನ್ಯಾಯಪೀಠದಿಂದ ಅಂತಹ ಯಾವ ನಿರ್ದೇಶನವು ಬಂದಿರುವುದಿಲ್ಲ.

ಉ)	ಕೆರೆಯ ಮಾಲಿನ್ಯ ತಡೆಗೆ ಪರಿಷ್ಕೃತ ಕ್ರಿಯಾ ಯೋಜನೆ ಸಲ್ಲಿಸುವಂತೆ ನ್ಯಾಯಾಲಯ ನೀಡಿದ್ದ ಸೂಚನೆಯನ್ನು ಸರ್ಕಾರ ಪಾಲಿಸಿದೆಯೇ? (ಪರಿಷ್ಕೃತ ಕ್ರಿಯಾ ಯೋಜನೆಯ ವಿವರ ನೀಡುವುದು)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬೆಳ್ಳಂದೂರು ಕೆರೆಯ ಸಮಗ್ರ ಅಭಿವೃದ್ಧಿಗಾಗಿ ತಾಂತ್ರಿಕ ಸಲಹೆಗಾರರನ್ನು ಆಯ್ಕೆ ಮಾಡಲು Request For Qualification for appointment of Project Management Consultant (PMC) for Rejuvenation & Restoration of the Bellandur Lake, Bangalore East Taluk ಅಧಿಸೂಚನೆಯನ್ನು 07.11.2018 ರಂದು ಹೊರಡಿಸಲಾಗಿದೆ. ಆಸಕ್ತಿ ಹೊಂದಿರುವ ಬಿಡ್ದುದಾರರು ದಿನಾಂಕ: 23.11.2018 ರಂದು Pre Bid ಸಭೆಗೆ ಹಾಜರಾಗಿ ಕೆಲವು ಪ್ರಶ್ನೆಗಳನ್ನು ಸಲ್ಲಿಸಿದ್ದು, ಸದರಿ ಪ್ರಶ್ನೆಗಳಿಗೆ ಪ್ರಾಧಿಕಾರದಿಂದ ಉತ್ತರವನ್ನು ತಯಾರಿಸಿ GOK e-procurement Portal ನಲ್ಲಿ ಮಾಹಿತಿಗಾಗಿ ಅಪ್‌ಲೋಡ್ ಮಾಡಲಾಗಿದೆ. ಮುಂದುವರೆದು, ದಿನಾಂಕ: 14.12.2018 ರಂದು ಬೆಳಗ್ಗೆ 11:00 ಗಂಟೆಯ ನಂತರ ಟೆಂಡರ್ ಬಿಡ್‌ನ್ನು ತೆರಯಲಾಗುವುದು.

ಸಂಖ್ಯೆ: ನಅಇ 656 ಬೆಂಭೂಸ್ವಾ 2018

(ಡಾ. ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1343
ಸದಸ್ಯರ ಹೆಸರು	ಶ್ರೀ. ವಿ.ಮುನಿಯಪ್ಪ(ಶಿಡ್ಲಘಟ್ಟ)
ಉತ್ತರಿಸಬೇಕಾದ ದಿನಾಂಕ	12/12/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ.ಸ	ಚುಕ್ಕೆ ಗುರುತಿಲ್ಲದ ಪ್ರಶ್ನೆ	ಉತ್ತರ
ಅ	ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅಕ್ರಮ ಸಕ್ರಮ ಯೋಜನೆಯಲ್ಲಿ ಎಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ. (ತಾಲ್ಲೂಕುವಾರು ನೀಡುವುದು)	(see table below)
ಆ	ನಗರಯೋಜನಾ ಪ್ರಾಧಿಕಾರದಿಂದಅನುಮೋದನೆಯಾಗದ ಈಗಾಗಲೇ ಖಾತೆತೆರೆದಿರುವ ಖಾತೆಗಳನ್ನು ಮುಂದುವರೆಸಲು ಯಾವ ಕ್ರಮ ತೆಗೆದುಕೊಳ್ಳಲಾಗುವುದು.	ನಗರ ಪ್ರದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಸಕ್ಷಮ ಪ್ರಾಧಿಕಾರದ ಅನುಮೋದನೆಯಾಗದೇ ಇರುವ ಕೆಲವು ನಿವೇಶನ/ಜಾಗಗಳ ಖಾತಾದಾಖಲು/ವರ್ಗಾವಣೆಯ ವಿಚಾರವಾಗಿ ಖಾತಾ ವರ್ಗಾವಣೆಗಳಲ್ಲಿನ ಸಮಸ್ಯೆಗಳ ಕುರಿತು ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಮಾರ್ಗದರ್ಶನ ಕೋರಿ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ. ಸದರಿ ಪ್ರಸ್ತಾವನೆ ಸರ್ಕಾರದ ಪರಿಶೀಲನಾ ಹಂತದಲ್ಲಿರುತ್ತದೆ.
ಇ	ಜಿಲ್ಲೆಯಲ್ಲಿರುವ ನಗರಸಭೆಗಳಲ್ಲಿ ಸಿಬ್ಬಂದಿ ಕೊರತೆಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸಿಬ್ಬಂದಿ ತುಂಬಲು ಯಾವಕ್ರಮ ಕೈಗೊಳ್ಳಲಾಗುವುದು.	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಗ್ರೂಪ್ 'ಬಿ' ಮತ್ತು 'ಸಿ' ವೃಂದದಒಟ್ಟು 1129 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಾ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಒಟ್ಟು ಈ ಪೈಕಿ 245 ಜನ ನೇಮಕಾತಿ ಆದೇಶ ಪಡೆದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ ಹಾಗೂ 80 ಅಭ್ಯರ್ಥಿಗಳ ದಾಖಲಾತಿಗಳು ಪರಿಶೀಲನೆಯಲ್ಲಿರುತ್ತವೆ, ನೇಮಕಾತಿ ಆದೇಶ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ನೇಮಕಾತಿ ಆದೇಶ ನೀಡಲು ಕೌನ್ಸಿಲಿಂಗ್‌ಗೆ ಗೈರುಹಾಜರಾಗಿರುವ 15 ಹುದ್ದೆಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಆಯ್ಕೆ ಪಟ್ಟಿಗೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸುವುದು ಬಾಕಿ ಇರುತ್ತದೆ. ಉಳಿದಂತೆ 789 ವಿವಿಧ ಹುದ್ದೆಗಳ ಆಯ್ಕೆ ಪ್ರಕ್ರಿಯೆ

ಉತ್ತರ (ಅ):

ಕ್ರ.ಸಂ	ನಗರಸಭೆ/ಪುರಸಭೆ/ ಪ.ಪಂಚಾಯಿತಿಗಳ ಹೆಸರು	ಅರ್ಜಿಗಳ ಸಂಖ್ಯೆ
1	ಚಿಕ್ಕಬಳ್ಳಾಪುರ	ಸಾರ್ವಜನಿಕರು ಯಾವುದೇ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ
2	ಚಿಂತಾಮಣಿ	1710 ಅರ್ಜಿಗಳು ಸ್ವೀಕೃತವಾಗಿರುತ್ತವೆ.
3	ಶಿಡ್ಲಘಟ್ಟ	ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ.
4	ಗೌರಿಬಿದನೂರು	185 ಅರ್ಜಿಗಳು ಸ್ವೀಕೃತವಾಗಿರುತ್ತವೆ.
5	ಬಾಗೇಪಲ್ಲಿ	345 ಅರ್ಜಿಗಳು ಸ್ವೀಕೃತವಾಗಿರುತ್ತವೆ.
6	ಗುಡಿಬಂಡೆ	03 ಅರ್ಜಿಗಳು ಸ್ವೀಕೃತವಾಗಿರುತ್ತವೆ.

		ಲೋಕಾ ಸೇವಾ ಆಯೋಗದಲ್ಲಿ ಚಾಲ್ತಿಯಲ್ಲಿರುತ್ತದೆ. ಹೊಸದಾಗಿ ವಿವಿಧ ವೃಂದದ ಒಟ್ಟು 341 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿಗಾಗಿ ಕಡತ ಸಲ್ಲಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಆಯ್ಕೆಯಾದ ನಂತರ ಖಾಲಿ ಹುದ್ದೆಗಳ ಭರ್ತಿಗೆ ನಿಯಮಾನುಸಾರ ಕ್ರಮ ವಹಿಸಲಾಗುವುದು. ಮಹಾನಗರ ಪಾಲಿಕೆಗಳು ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಗ್ರೂಪ್-ಡಿ ವೃಂದದ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳು 2017ರ ರೀತ್ಯಾ ಜಿಲ್ಲಾಧಿಕಾರಿಗಳ ಹಂತದಲ್ಲಿ ಖಾಯಂ ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ. ಈಗಾಗಲೇ 8 ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಅಂತಿಮವಾಗಿರುತ್ತದೆ.

ಸಂಖ್ಯೆ: ನಅಇ 273 ಜಿಇಎಲ್ 2018

(ರಮೇಶ್ ಲ. ಜಾರಕಿಹೊಳಿ)
ಪೌರಾಡಳಿತ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	246
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
ಉತ್ತರಿಸಬೇಕಾದ ದಿನಾಂಕ	:	12.12.2018
ಉತ್ತರಿಸಬೇಕಾದವರು	:	ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹುಬ್ಬಳ್ಳಿ-ಧಾರವಾಡ ಮಹಾನಗರಗಳಲ್ಲಿ 24*7 ನೀರು ಸರಬರಾಜು ನಿರ್ವಹಣೆ ಕಛೇರಿಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗೊಳ್ಳಲಾದ ಕ್ರಮಗಳೇನು;	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಯೋನಿವೃತ್ತಿ ಹೊಂದಿರುವ್ಯದರಿಂದ/ಹೊಂದುತ್ತಿರುವುದರಿಂದ ಹುಬ್ಬಳ್ಳಿ-ಧಾರವಾಡ ಮಹಾನಗರಗಳಲ್ಲಿ 24*7 ನೀರು ಸರಬರಾಜು ನಿರ್ವಹಣೆ ಕಛೇರಿಯಲ್ಲಿ ಅಧಿಕಾರಿ/ ಸಿಬ್ಬಂದಿಗಳ ಕೊರತೆ ಉಂಟಾಗಿರುತ್ತದೆ. ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು.
ಆ)	ಈ ಕಛೇರಿಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಆ ಪೈಕಿ ಭರ್ತಿಯಾಗಿರುವ ಹುದ್ದೆಗಳು ಎಷ್ಟು (ವಿವರ ನೀಡುವುದು)?	ಮಂಡಳಿಯ ಹುಬ್ಬಳ್ಳಿ-ಧಾರವಾಡ ಮಹಾನಗರಗಳಲ್ಲಿ 24*7 ನೀರು ಸರಬರಾಜು ನಿರ್ವಹನೆ ವಿಭಾಗ ಮತ್ತು ಉಪ ವಿಭಾಗಗಳಲ್ಲಿ ಒಟ್ಟು ಮಂಜೂರಾಗಿರುವ ಹುದ್ದೆಗಳ ಸಂಖ್ಯೆ-66, ಭರ್ತಿಯಾಗಿರುವ ಒಟ್ಟು ಹುದ್ದೆಗಳು – 29 ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳ ವಿವರ	ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ವಿವರ
1	ಕಾರ್ಯಪಾಲಕ ಅಭಿಯಂತರರ	2	2
2	ತಾಂತ್ರಿಕ ಸಹಾಯಕರು	5	4
3	ಸಹಾಯಕ ಕಾರ್ಯಪಾಲಕ ಅಭಿಯಂತರರು	2	1
4	ಸಹಾಯಕ ಅಭಿಯಂತರರು	15	3
5	ಕಿರಿಯ ಅಭಿಯಂತರರು	13	3
6	ಅಧೀಕ್ಷಕರು	3	2
7	ಲೆಕ್ಕಾಧೀಕ್ಷಕರು	2	2
8	ಪ್ರಥಮ ದರ್ಜೆ ಸಹಾಯಕರು	11	4
9	ದ್ವಿತೀಯ ದರ್ಜೆ ಸಹಾಯಕರು	13	8
	ಒಟ್ಟು	**66**	**29**

ಸಂಖ್ಯೆ: ನಅಇ 73 ಯುಡಬ್ಲ್ಯೂಎಲ್ 2018

(ಯು.ಟಿ.ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಕರ್ನಾಟಕ ವಿಧಾನಸಭೆ

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ.ಡಿ.ಎಸ್.ಹಲಗೇರಿ (ಲಿಂಗಸುಗೂರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1351
ಉತ್ತರಿಸಬೇಕಾದ ದಿನಾಂಕ : 12-12-2018
ಉತ್ತರಿಸಬೇಕಾದವರು : ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಲಿಂಗಸಗೂರು ಹಾಗೂ ಮುದಗಲ್ಲ ಪಟ್ಟಣಗಳಲ್ಲಿ ಒಳಚರಂಡಿ ನಿರ್ಮಾಣ ಹಾಗೂ 24X7 ಕುಡಿಯುವ ನೀರಿನ ಯೋಜನೆಯ ಕಾಮಗಾರಿಗೆ ಮಂಜೂರಾತಿ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	**1) ಲಿಂಗಸುಗೂರು ಪಟ್ಟಣ.** **ಅ) ಒಳಚರಂಡಿ ಯೋಜನೆ:** ಪಟ್ಟಣಕ್ಕೆ ಒಳಚರಂಡಿ ಯೋಜನೆ ಅಳವಡಿಸಲು ರೂ.6980.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯು ಕೋರಿದ್ದು, ಅನುದಾನದ ಕೊರತೆಯಿಂದ ದಿನಾಂಕ 18.09.2015ರಂದು ಪ್ರಸ್ತಾವನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಿಂದಿರುಗಿಸಲಾಗಿದೆ. **2) ಮುದುಗಲ್ ಪಟ್ಟಣ.** **ಅ) ಒಳಚರಂಡಿ ಯೋಜನೆ:** ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯಿಂದ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. **ಆ) 24x7 ಕುಡಿಯುವ ನೀರಿನ ಯೋಜನೆ:** ಸರ್ಕಾರದ ಪರಿಷ್ಕೃತ ಆದೇಶ ಸಂಖ್ಯೆ: ನಅಇ 14 ಪಿಆರ್‌ಜೆ 2012, ದಿನಾಂಕ 15.12.2017 ರಲ್ಲಿ 9 ಪಟ್ಟಣಗಳಿಗೆ ರೂ.205.87 ಕೋಟಿ ಅಂದಾಜು ವೆಚ್ಚದಲ್ಲಿ ನೀರು ಸರಬರಾಜು ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ ನೀಡಿದೆ. ಸದರಿ 9 ಪಟ್ಟಣಗಳಲ್ಲಿ ರಾಯಚೂರು ಜಿಲ್ಲೆಯ ಮುದಗಲ್ ಪುರಸಭೆಯೂ ಸಹ ಒಂದಾಗಿರುತ್ತದೆ. ಮುದಗಲ್ ಪಟ್ಟಣದ ನೀರು ಸರಬರಾಜು ಅಭಿವೃದ್ಧಿ ಯೋಜನೆಗೆ ರೂ.34.96 ಕೋಟಿಗೆ ಅನುಮೋದನೆ ಪಡೆಯಲಾಗಿರುತ್ತದೆ. ಮುದಗಲ್ ಪಟ್ಟಣದಲ್ಲಿ ನೀರು ಸರಬರಾಜು ಅಭಿವೃದ್ಧಿ ಯೋಜನೆಗಳ ಅನುಷ್ಠಾನವು ಈಗಾಗಲೇ ಆರಂಭವಾಗಿ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ನಅಇ 68 ಯುಡಬ್ಲ್ಯೂಎಲ್ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	894
02.	ಸದಸ್ಯರ ಹೆಸರು	:	ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ (ಸವದತ್ತಿ ಯಲ್ಲಮ್ಮ)
03.	ಉತ್ತರಿಸುವ ದಿನಾಂಕ	:	12.12.2018
04.	ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸವದತ್ತಿ ಯಲ್ಲಮ್ಮ ಮತಕ್ಷೇತ್ರ ವ್ಯಾಪ್ತಿಯ ಯರಗಟ್ಟಿಯು ವಾಣಿಜ್ಯೋದ್ಯಮ ನಗರವಾಗಿ ತ್ವರಿತಗತಿಯಲ್ಲಿ ಬೆಳೆಯುತ್ತಿದ್ದು, ಇಲ್ಲಿರುವ ಪೋಲೀಸ್ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಷ್ಟ್ರೀಯ ಪೋಲೀಸ್ ಆಯೋಗ (ಶ್ರೀ ಧರ್ಮವೀರ ಆಯೋಗ) ವರದಿಯನ್ನು ಆಧರಿಸಿ ಪೋಲೀಸ್ ಕೇಂದ್ರ ಕಛೇರಿಯಿಂದ ನೂತನ ಪೋಲೀಸ್ ಠಾಣೆಗಳ ಸೃಜನೆಗೆ ಸಂಬಂಧಿಸಿದಂತೆ ಸುತ್ತೋಲೆ ಸಂಖ್ಯೆ: ಆರ್‌ಎಲ್‌ಎನ್(5)2/2017-18 ದಿನಾಂಕ 28.12.2017 ಹೊರಡಿಸಲಾಗಿದೆ. ಅದರ ಅನುಸಾರ ನೂತನ ಪೋಲೀಸ್ ಠಾಣೆ ಸ್ಥಾಪಿಸಲು 75 ಮೈಲಿ / 150 ಚದರ ಕಿ.ಮೀ. ವಿಸ್ತೀರ್ಣ, ವಾರ್ಷಿಕ 300 ಅಪರಾಧ ಪ್ರಕರಣಗಳು ಮತ್ತು ಜನಗಣತಿ ಅನುಸಾರ 50,000 ದಿಂದ 60,000 ಜನಸಂಖ್ಯೆ ಇರಬೇಕಾಗುತ್ತದೆ. ಯರಗಟ್ಟಿ ಪೋಲೀಸ್ ಠಾಣೆಯನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಯಲ್ಲಿನ ಮಾಹಿತಿ ಈ ಕೆಳಕಂಡಂತಿದೆ: ವಿಸ್ತೀರ್ಣ : 368 ಚದರ ಕಿ.ಮೀ. ಜನಸಂಖ್ಯೆ : 1,05,498 ಅಪರಾಧ ಪ್ರಕರಣ : 2015 – 242; 2016 – 296; 2017 – 269 ಈ ಪ್ರಸ್ತಾವನೆಯು ರಾಷ್ಟ್ರೀಯ ಪೋಲೀಸ್ ಆಯೋಗ ನಿಗದಿಪಡಿಸಿರುವ ಮಾನದಂಡಗಳನ್ನು ಪೂರೈಸುವುದಿಲ್ಲ.
ಆ)	ಮಾನ್ಯ ಗೃಹ ಸಚಿವರು ಸದನದಲ್ಲಿ ಸದರಿ ವಿಷಯದ ಕುರಿತು ಅನುದಾನದ ಲಭ್ಯತೆ ಹಾಗೂ ಆದ್ಯತೆ ಮೇರೆಗೆ ಪರಿಶೀಲಿಸಲಾಗುವುದೆಂದು ಲಿಖಿತವಾಗಿ ಉತ್ತರಿಸಿದ್ದು, ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ)	ಹಾಗಿದ್ದಲ್ಲಿ, ಸರ್ಕಾರವು ಯಾವ ಕಾಲಮಿತಿಯೊಳಗೆ ಮಂಜೂರಾತಿ ನೀಡುವುದು? (ಸಂಪೂರ್ಣ ಮಾಹಿತಿ ನೀಡುವುದು)	

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಒಇ 175 ಪಿಓಪಿ 2018

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	226
02.	ಸದಸ್ಯರ ಹೆಸರು	:	ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ)
03.	ಉತ್ತರಿಸುವ ದಿನಾಂಕ	:	12.12.2018
04.	ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಟಿಪ್ಪು ಜಯಂತಿ ಆಚರಣೆ ಸಂದರ್ಭದಲ್ಲಿ ಎಲ್ಲೆಲ್ಲಿ ಗಲಭೆಗಳು ನಡೆದಿರುತ್ತವೆ? ಈ ಸಂಬಂಧ ಎಷ್ಟು ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಟಿಪ್ಪು ಜಯಂತಿ ಆಚರಣೆ ಸಂದರ್ಭದಲ್ಲಿ ಯಾವುದೇ ಗಲಭೆ ಪ್ರಕರಣಗಳು ದಾಖಲಾಗಿರುವುದಿಲ್ಲ.
ಆ)	ಪ್ರಕರಣ ದಾಖಲಾದವರ ಮೇಲೆ ಯಾವ ಯಾವ ಮೊಕದ್ದಮೆಗಳನ್ನು ಹಾಕಲಾಗಿದೆ (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಉದ್ಭವಿಸುವುದಿಲ್ಲ.
ಇ)	ಎಷ್ಟು ಜನರನ್ನು ಬಂಧಿಸಲಾಗಿದೆ (ಹೆಸರು ಸಹಿತ ವಿವರಗಳನ್ನು ಒದಗಿಸುವುದು)	

ಒಇ 607 ಎಸ್‌ಎಸ್‌ಟಿ 2018

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1349
02.	ಸದಸ್ಯರ ಹೆಸರು	:	ಡಾ|| ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)
03.	ಉತ್ತರಿಸುವ ದಿನಾಂಕ	:	12.12.2018
04.	ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಮಹಿಳಾ ಪೊಲೀಸ್ ಠಾಣೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಹಾಗಿದ್ದಲ್ಲಿ ಈ ಮಹಿಳಾ ಪೊಲೀಸ್ ಠಾಣೆಯನ್ನು ಯಾವಾಗ ಮಂಜೂರು ಮಾಡಲಾಗುವುದು;	ಸರ್ಕಾರದ ಪ್ರಸ್ತುತ ನೀತಿಯನುಸಾರ ಈಗಾಗಲೇ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದು ಮಹಿಳಾ ಪೊಲೀಸ್ ಠಾಣೆ ಕರ್ತವ್ಯ ನಿರ್ವಹಿಸುತ್ತಿರುತ್ತದೆ. ಹಾಗೆಯೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಂದು ಮಹಿಳಾ ಪೊಲೀಸ್ ಠಾಣೆ ದೊಡ್ಡಬಳ್ಳಾಪುರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಆದುದರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಒಳಪಡುವ ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಮತ್ತೊಂದು ಮಹಿಳಾ ಪೊಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.
ಇ)	ಈ ಹಿಂದೆ ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಪ್ರತ್ಯೇಕ ಮಹಿಳಾ ಪೊಲೀಸ್ ಠಾಣೆಯನ್ನು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಈ)	ಬಂದಿದ್ದಲ್ಲಿ ಈವರೆಗೂ ಕೋರಿಕೆ ಕಾರ್ಯಗತ ಆಗದೇ ಇರುವುದಕ್ಕೆ ಕಾರಣವೇನು;	
ಉ)	ಈ ಕ್ಷೇತ್ರ ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುವ ಪ್ರಮುಖ ರಸ್ತೆಯಾಗಿರುವುದರಿಂದ ಮಹಿಳಾ ಪೊಲೀಸ್ ಠಾಣೆ ಅವಶ್ಯಕವಾಗಿದ್ದು, ತುರ್ತಾಗಿ ಮಂಜೂರಾತಿ ದೊರೆಯಬಹುದೇ? (ವಿವರ ನೀಡುವುದು)	

ಒಇ 178 ಪಿಪಿಪಿ 2018

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	174
2	ಸದಸ್ಯರ ಹೆಸರು	:	ಶ್ರೀ ವಿ.ಸೋಮಣ್ಣ
3	ಉತ್ತರಿಸುವ ದಿನಾಂಕ	:	12-12-2018
4	ಉತ್ತರಿಸುವವರು	:	ಮಾನ್ಯ ಉಪಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಬಿ ಖಾತೆ ಸ್ವತ್ತುಗಳಿವೆ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟಾರೆ ಸುಮಾರು 3,83,014 ಸ್ವತ್ತುಗಳ ವಿವರಗಳನ್ನು ಬಿ ವಹಿಯಲ್ಲಿ ದಾಖಲಿಸಲಾಗಿರುತ್ತದೆ.
ಆ	ಬಿ ಖಾತಾ ಸ್ವತ್ತುಗಳಿಗೆ ಎ ಖಾತೆ ನೀಡುವ ಕುರಿತು ಸರ್ಕಾರದ ನಿಲುವೇನು; ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಬಿ ಸ್ವತ್ತುಗಳಿಗೆ ಎ ಖಾತೆ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲದ ಕಾರಣ ಈ ರೀತಿ ಖಾತೆ ವರ್ಗಾವಣೆ ಮಾಡಲು ಯಾವುದೇ ಪ್ರಸ್ತಾಪ ಇರುವುದಿಲ್ಲ. ಬಿ ವಹಿಯಲ್ಲಿ ದಾಖಲಿಸಿರುವ ಸ್ವತ್ತುಗಳನ್ನು ಎ ವಹಿಗೆ ವರ್ಗಾಯಿಸಿದ್ದಲ್ಲಿ ಅಂದಾಜು ರೂ.840 ಕೋಟಿಗಳಷ್ಟು ಆದಾಯವನ್ನು ನಿರೀಕ್ಷಿಸಬಹುದಾಗಿರುತ್ತದೆ.
ಇ	ಬಿ ಖಾತಾ ಸ್ವತ್ತುಗಳಿಗೆ ಎ ಖಾತಾ ನೀಡುವುದರಿಂದ ಪಾಲಿಕೆಗೆ ಹೆಚ್ಚಳವಾಗುವ ಆದಾಯ ಎಷ್ಟು; ಎಂದಿನಿಂದ ಎ ಖಾತೆ ನೀಡುವ ಕಾರ್ಯ ಆರಂಭವಾಗಲಿದೆ?	

ಸಂಖ್ಯೆ: ನಅಇ 638 ಎಂಎನ್‌ಯು 2018

(ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

<u>ಕರ್ನಾಟಕ ವಿಧಾನ ಸಭೆ</u>

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	376
2	ಸದಸ್ಯರ ಹೆಸರು	:	ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್
3	ಉತ್ತರಿಸುವ ದಿನಾಂಕ	:	12-12-2018
4	ಉತ್ತರಿಸುವವರು	:	ಮಾನ್ಯ ಉಪಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ರಾಜಕಾಲುವೆಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರವನ್ನು ವಿಧಾನ ಸಭಾ ಕ್ಷೇತ್ರವಾರು ನೀಡುವುದು);	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 633 ಮಳೆ ನೀರುಗಾಲುವೆಗಳು ಇರುತ್ತವೆ. ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.
ಆ	ಮುಚ್ಚಿಹೋಗಿರುವ, ಕಣ್ಮರೆಯಾಗಿರುವ ಮತ್ತು ಒತ್ತುವರಿಯಾಗಿರುವ ರಾಜಕಾಲುವೆಗಳನ್ನು ಸರ್ವೆ ಮಾಡಲು ಆದೇಶ ನೀಡಲಾಗಿದೆಯೇ; ಸರ್ವೆ ಕಾರ್ಯ ಪೂರ್ಣಗೊಂಡಿದೆಯೇ; (ವರದಿಯ ಪ್ರತಿ ಒದಗಿಸುವುದು)	ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 31394/2009 (LB-BMP-PIL) & ರಿಟ್ ಅರ್ಜಿ ಸಂಖ್ಯೆ: 38401/2014 ರಲ್ಲಿ ನೀಡಿದ ಆದೇಶದಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ದಿನಾಂಕ: 15-11-2018 ರಲ್ಲಿ ಮಳೆ ನೀರುಗಾಲುವೆಗಳ ಒತ್ತುವರಿಗೆ ಸಂಬಂಧಿಸಿದಂತೆ ಸರ್ವೆ ಕಾರ್ಯ ಕೈಗೊಳ್ಳಲು ಆದೇಶ ನೀಡಿರುತ್ತಾರೆ. ಅದರಂತೆ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ ಎಂದು ಬಿಬಿಎಂಪಿ ಆಯುಕ್ತರು ವರದಿ ಮಾಡಿರುತ್ತಾರೆ.
ಇ	ಕಳೆದ 3 ವರ್ಷಗಳಿಂದ ರಾಜಕಾಲುವೆಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಿರುವ ಹಣ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ಮಾಹಿತಿಯನ್ನು ವರ್ಷವಾರು ನೀಡುವುದು);	ಕಳೆದ 3 ವರ್ಷಗಳಿಂದ ರಾಜಕಾಲುವೆಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಿರುವ ಮೊತ್ತ ರೂ. 117882.4 ಲಕ್ಷಗಳಾಗಿದ್ದು, ವಿವರಗಳನ್ನು **ಅನುಬಂಧ-2** ರಲ್ಲಿ ಮತ್ತು ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು **ಅನುಬಂಧ-3** ರಲ್ಲಿ ನೀಡಿದೆ.
ಈ	ಒತ್ತುವರಿ ಆಗಿರುವ ರಾಜಕಾಲುವೆಯನ್ನು ತೆರೆವುಗೊಳಿಸಲಾಗಿದೆಯೇ; ಯಾವ್ಯಾವ ರಾಜಕಾಲುವೆಗಳ ಒತ್ತುವರಿ ತೆರವು ಕಾರ್ಯ ಮುಗಿದಿದೆ; ಉಳಿದ ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಮಳೆನೀರುಗಾಲುವೆಗಳಲ್ಲಿ ಮೊದಲನೇ ಹಂತದಲ್ಲಿ ಒಟ್ಟು 2515 ಒತ್ತುವರಿಗಳನ್ನು ಗುರುತಿಸಿದ್ದು, ಅವುಗಳಲ್ಲಿ 428 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಎರಡನೇ ಹಂತದಲ್ಲಿ ಗುರುತಿಸಿರುವ 450 ಪ್ರಕರಣಗಳಿಗೆ 28 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಉಳಿಕೆ ಒತ್ತುವರಿ ತೆರವುಗೊಳಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

